# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಬುಧವಾರ, ನವೆಂಬರ್ 27, 2024

ಸಂಪುಟ : 51 ಸಂಚಿಕೆ : 194 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com








ಚಿತ್ರಗಳು: ರಫೀಕ್, ಜನತಾವಾಣಿ

## ಎಪಿಎಂಸಿಗೆ ಜೀವಕಳೆ ....!

ದಾವಣಗೆರೆ, ನ. 26- ಕಳೆದ ವರ್ಷ ಬರದಿಂದ ಕಳೆಗುಂದಿದ್ದ ಕೃಷಿ ಉತ್ಪನ್ನ ಮಾರುಕಟ್ಟೆಗೆ ಈ ಬಾರಿಯ ಉತ್ತಮ ಮಳೆಯಿಂದಾಗಿ ಜೀವಕಳೆ ಬಂದಿದೆ. ಸುಗ್ಗಿಯ ಕಾಲ ಆರಂಭವಾಗಿದ್ದು, ದಿನೇ ದಿನೇ ಮಾರುಕಟ್ಟೆಗೆ ಆವಕ ಹೆಚ್ಚಾಗುತ್ತಿದೆ. ಎಲ್ಲಿ ನೋಡಿದರೂ ಭತ್ತ ಹಾಗೂ ಮೆಕ್ಕೆಜೋಳದ ರಾಶಿಗಳು ಕಾಣುತ್ತಿವೆ. ಉತ್ಪನ್ನಗಳಿಗೆ ಉತ್ತಮ ಬೆಲೆ ಇರುವ ಕಾರಣ ರೈತರೂ ಸಹ ಖುಷಿಯಿಂದಲೇ ಬೆಳೆಯೊಂದಿಗೆ ಎಪಿಎಂಸಿಗೆ ದಾಂಗುಡಿ ಇಡುತ್ತಿದ್ದಾರೆ.

ಪುರುಷ, ಮಹಿಳೆ ಎನ್ನದೆ ಹಮಾಲರು ಬಿಡುವಿಲ್ಲದೆ ದುಡಿಮೆಯಲ್ಲಿ ಮಗ್ನರಾಗಿದ್ದಾರೆ. ಚಹಾ ಅಂಗಡಿಗಳು, ಹೋಟೆಲ್‌ಗಳು, ಗೋಣಿಚೀಲ ವ್ಯಾಪಾರ, ಲಾರಿ ಮಾಲೀಕರು ಹೀಗೆ ಎಲ್ಲರಿಗೂ ಎಪಿಎಂಸಿ ಅನ್ನ ನೀಡುತ್ತಿದೆ. ದಲ್ಲಾಳಿಗಳೂ ಸೇರಿದಂತೆ ಸದ್ಯ ಎಲ್ಲರ ಮುಖದಲ್ಲೂ ಮಂದಹಾಸವಿದೆ.

# ಮಹಾರಾಷ್ಟ್ರ ಸಿಎಂ ರಾಜೀನಾಮೆ

## ಮುಂದಿನ ಆಯ್ಕೆಗೆ ಅವಸರ ಮಾಡದಿರಲು ಬಿಜೆಪಿ ನಿರ್ಧಾರ

ಮುಂಬೈ, ನ. 26 – ಮಹಾರಾಷ್ಟ್ರ ಮುಖ್ಯಮಂತ್ರಿ ಸ್ಥಾನಕ್ಕೆ ಏಕನಾಥ ಶಿಂಧೆ ರಾಜೀನಾಮೆ ನೀಡಿದ್ದಾರೆ. ಇದರೊಂದಿಗೆ ನೂತನ ಸರ್ಕಾರದ ರಚನೆಯ ಪ್ರಕ್ರಿಯೆ ಆರಂಭವಾಗಿದೆ.

ಮುಖ್ಯಮಂತ್ರಿ ಸ್ಥಾನ ತನಗೇ ನೀಡಬೇಕು ಎಂದು ಶಿವಸೇನೆ ಪಟ್ಟು ಹಿಡಿದಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಆಯ್ಕೆ ಬಗ್ಗೆ ಬಿಜೆಪಿ ನೇತೃತ್ವದ ಎನ್.ಡಿ.ಎ. ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ.

ಉಪ ಮುಖ್ಯಮಂತ್ರಿಗಳಾದ ದೇವೇಂದ್ರ ಫಡ್ನವೀಸ್ ಹಾಗೂ ಅಜಿತ್ ಪವಾರ್ ಜೊತೆಗೂಡಿ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಅವರಿಗೆ ಶಿಂಧೆ ರಾಜೀನಾಮೆ ಸಲ್ಲಿಸಿದ್ದಾರೆ. ಮುಂದಿನ ಮುಖ್ಯಮಂತ್ರಿ ಪ್ರಮಾಣ ವಚನದವರೆಗೆ ಹಂಗಾಮಿ ಮುಖ್ಯಮಂತ್ರಿಯಾಗಿ ಮುಂದುವರೆಯುವಂತೆ ರಾಜ್ಯಪಾಲರು ತಿಳಿಸಿದ್ದಾರೆ. ಮಂಗಳವಾರದಂದು ವಿಧಾನಸಭೆಯ ಅವಧಿ ಮುಕ್ತಾಯವಾಗಿದೆ.

ರಾಜ್ಯದ 288 ಸ್ಥಾನಗಳಲ್ಲಿ ಎನ್.ಡಿ.ಎ. ಮೈತ್ರಿಕೂಟ 230 ಸ್ಥಾನ ಪಡೆದಿದೆ. ಬಿಜೆಪಿ 132, ಶಿವಸೇನೆ 57 ಹಾಗೂ ಎನ್.ಸಿ.ಪಿ. 41 ಸ್ಥಾನಗಳನ್ನು ಪಡೆದಿವೆ.

ನೂತನ ಸರ್ಕಾರದ ಖಾತೆಗಳ ಹಂಚಿಕೆ ಪೂರ್ಣವಾಗುವವರೆಗೂ ಮುಖ್ಯಮಂತ್ರಿ ಸ್ಥಾನದ ಬಗ್ಗೆ ನಿರ್ಧರಿಸುವುದಿಲ್ಲ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಸ್ಥಾನ ಘೋಷಣೆಯ ಬಗ್ಗೆ ಹೈಕಮಾಂಡ್ ಯಾವುದೇ ಅವಸರ (2ನೇ ಪುಟಕ್ಕೆ)

# ಸಿಬಿಐಗೆ ಮುಡಾ: ವಿಚಾರಣೆ ಮುಂದಕ್ಕೆ

### ಸದ್ಯದ ಸ್ಥಿತಿ ತನಿಖಾ ವರದಿ ಸಲ್ಲಿಸದ ಲೋಕಾಯುಕ್ತ

ಬೆಂಗಳೂರು, ನ. 26 - ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ಪಡೆದಿರುವ 14 ಬಿಡಿ ನಿವೇಶನ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಕೋರಿ ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ರಾಜ್ಯ ಹೈಕೋರ್ಟ್ ಡಿಸೆಂಬರ್ 10ಕ್ಕೆ ಮುಂದೂಡಿದೆ.

ಪ್ರಕರಣ ಮುಂದೂಡಿದ ಹಿನ್ನೆಲೆಯಲ್ಲಿ ಲೋಕಾಯುಕ್ತರು ನಡೆಸಿದ 'ಸದ್ಯದ ಸ್ಥಿತಿ' (ಸ್ಟೇಟಸ್ ರಿಪೋರ್ಟ್) ತನಿಖಾ ವರದಿಯನ್ನು ಇಂದು ಸಲ್ಲಿಸಲಿಲ್ಲ.

ಹಗರಣಕ್ಕೆ ಸಂಬಂಧಿಸಿದಂತೆ ಜಮೀನು ಮಾಲೀಕ ದೇವರಾಜ್ ಸಲ್ಲಿಸಿದ್ದ ಎರಡು ಅರ್ಜಿಗಳ ವಿಚಾರಣೆಯನ್ನು ವಿಭಾಗೀಯ ಪೀಠ ಡಿಸೆಂಬರ್ 5ಕ್ಕೆ ಕೈಗೆತ್ತಿಕೊಳ್ಳಲಿದೆ. ರಾಜ್ಯಪಾಲರ ಪ್ರಾಸಿಕ್ಯೂಷನ್ ಆದೇಶವನ್ನು ನ್ಯಾಯಾಲಯ ಎತ್ತಿಹಿಡಿದಿರುವುದು ಹಾಗೂ ಬಿಡಿ ನಿವೇಶನಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತ ತನಿಖೆ ಪ್ರಶ್ನಿಸಿ ದೇವರಾಜು ವಿಭಾಗೀಯ ಪೀಠದ ಮೊರೆ ಹೋಗಿದ್ದಾರೆ.

ಸ್ನೇಹಮಯಿ ಕೃಷ್ಣ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ಕೈಗೆತ್ತಿಕೊಳ್ಳುತ್ತಿದ್ದಂತೆ ದೇವರಾಜ ಪರ ಹಿರಿಯ ವಕೀಲ ದುಷ್ಯಂತ ದವೆ ಮನವಿ ಮಾಡಿ, ತಮ್ಮ ಎರಡು ಆದೇಶಗಳನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೇವೆ. ಆ ಎರಡೂ ಅರ್ಜಿಗಳ (2ನೇ ಪುಟಕ್ಕೆ)

# ಬಿಜೆಪಿ ಬಲವರ್ಧನೆಗೆ ಕ್ಷೇತ್ರ ಸಂಚಾರ

## ಎಲ್ಲಾ 224 ವಿಧಾನಸಭಾ ಕ್ಷೇತ್ರಗಳ ಪ್ರವಾಸ : ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ



ದಾವಣಗೆರೆ, ನ.26- ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲೂ ಸಂಚರಿಸಿ, ಪಕ್ಷವನ್ನು ಮತ್ತಷ್ಟು ಬಲಾಢ್ಯಗೊಳಿಸಲಾಗುವುದು ಎಂದು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು ತಿಳಿಸಿದರು.

ಸಮೀಪದ ಶಿರಮಗೊಂಡನಹಳ್ಳಿ ಬಳಿ ಇರುವ ಶ್ರೀಮತಿ ಸುಧಾ ವೀರೇಂದ್ರ ಪಾಟೀಲ್ ಸಮುದಾಯ ಭವನದಲ್ಲಿ ಏರ್ಪಾಡಾಗಿದ್ದ ಮಾಜಿ ಸಿಎಂ, ಬಿಜೆಪಿ ಧುರೀಣ ಎಸ್.ಎ. ರವೀಂದ್ರನಾಥ್ ಅವರ 79ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಮಾತನಾಡಿದರು.

ಪ್ರತಿ ದಿನ ಕನಿಷ್ಠ ಎರಡರಿಂದ ಮೂರು ತಾಲ್ಲೂಕುಗಳಿಗೆ ಭೇಟಿ ನೀಡಿ ಪಕ್ಷದ ಬಲವರ್ಧನೆಗೆ ಅವಿರತ ಶ್ರಮಿಸುವುದಾಗಿ ಹೇಳಿದ ಅವರು, ಸೋತಿದ್ದೇವೆಂದು ಮನೆಯಲ್ಲಿಯೇ ಕೂರದೇ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿ ಪಕ್ಷವನ್ನು ಬೇರು ಮಟ್ಟದಿಂದ ಸಂಘಟಿಸುವ ಮೂಲಕ ಈ ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿಯನ್ನು ಅಧಿಕಾರಕ್ಕೆ ತರೋಣ ಎಂದು ಕರೆ ನೀಡಿದರು.

ರವೀಂದ್ರನಾಥ್ ಮತ್ತು ನನ್ನೊಂದಿಗಿನ ನಂಟು ಹಲವು ದಶಕಗಳದ್ದು, ಅಂದಿನಿಂದ ಇಂದಿನವರೆಗೆ ಅನೇಕ ಏರಿಳಿತಗಳನ್ನು ಕಂಡಿದ್ದೇನೆ. ತುಂಬಾ ಹತ್ತಿರದಿಂದ ಅವರನ್ನು ಬಲ್ಲೆ. ಕೇವಲ ಅಧಿಕಾರಕ್ಕಾಗಿ ಸಾರ್ವಜನಿಕ ಜೀವನಕ್ಕೆ ಬಂದವರಲ್ಲ. ಜನಸೇವೆಗಾಗಿ ಬಂದವರು. ಅವರ ಬದುಕಿನ ಮೌಲ್ಯ, ಆದರ್ಶ, ಅನುಭವ ಮಾರ್ಗದರ್ಶನವಾಗಲಿ ಎಂದರು.

ಪಕ್ಷದ ಸಿದ್ಧಾಂತ, ಮೌಲ್ಯಕ್ಕೆ ಬದ್ಧರಾಗಿ ಜನಸೇವೆ ಮಾಡಿ ಹೆಸರು ಗಳಿಸಿದವರು.ಇಂತಹ ಜನಾನುರಾಗಿ ನೇತಾರರು ರಾಜಕೀಯ ಕ್ಷೇತ್ರದಲ್ಲಿ ಸಿಗುವುದು ವಿರಳ. ಅಂತವರಲ್ಲಿ ರವೀಂದ್ರನಾಥ್ ಒಬ್ಬರು ಎಂದು ಅವರ ಸೇವಾ ಕಾರ್ಯಗಳನ್ನು ಕೊಂಡಾಡಿದರು.

ನೀರಾವರಿ ಯೋಜನೆ ಜಾರಿಗಾಗಿ ಅವಿರತ ಶ್ರಮಿಸಿದವರು. ಭದ್ರಾ ನೀರಿಗಾಗಿ ದಿಟ್ಟ ಹೋರಾಟ ಮಾಡಿದವರು. ಅವರ ದಿಟ್ಟತನ, ದಕ್ಷ ಆಡಳಿತವನ್ನು ಮೆಚ್ಚಿಕೊಂಡಿದ್ದರಿಂದಲೇ ಇಷ್ಟೊಂದು ಅಭಿಮಾನಿಗಳು ನೆರೆದಿದ್ದಾರೆ ಎಂದು ಹೇಳಿದರು.

'ಭಾರತದ ಸಂವಿಧಾನ' ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠವಾದ ಸಂವಿಧಾನವಾಗಿದೆ. ಅಂಬೇಡ್ಕರ್ ಸಂವಿಧಾನ ಇರುವುದರಿಂದಲೇ ಪ್ರಜಾಪ್ರಭುತ್ವ ಗಟ್ಟಿಯಾಗಿ ನೆಲೆ ನಿಲ್ಲಲು ಸಾಧ್ಯವಾಗಿದೆ. (4ನೇ ಪುಟಕ್ಕೆ)

### ಭಿನ್ನಾಭಿಪ್ರಾಯ ಮರೆತು ಪಕ್ಷ ಸಂಘಟನೆಗೆ ಒಟ್ಟಾಗುತ್ತೇವೆ

ಬಿಜೆಪಿಯಲ್ಲಿ ಕೆಲವರು ಒಡಕುಂಟು ಮಾಡುತ್ತಿದ್ದಾರೆಂಬ ಆರೋಪ ನಿಜ. ಈ ಬಗ್ಗೆ ಕೇಂದ್ರ ನಾಯಕರ ಗಮನಕ್ಕೆ ತಂದಿದ್ದು, ಶೀಘ್ರದಲ್ಲಿಯೇ ಎಲ್ಲರೂ ಒಟ್ಟಾಗಿಯೇ ಪಕ್ಷ ಸಂಘಟನೆಗೆ ಬದ್ಧರಾಗಿ ದುಡಿಯುತ್ತೇವೆ ಎಂದು ಮಾಜಿ ಸಿಎಂ ಬಿ.ಎಸ್ ಯಡಿಯೂರಪ್ಪ ಹೇಳಿದರು.

ಇಂದಿಲ್ಲಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಬಿಜೆಪಿ 'ಮನೆಯೊಂದು ಮೂರು ಬಾಗಿಲು' ಎನ್ನುವಂತಾಗಿದೆ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಪಕ್ಷದ ಹಿತದೃಷ್ಟಿಯಿಂದ ಎಲ್ಲರೂ ಒಟ್ಟಾಗಿ ಚರ್ಚೆ (4ನೇ ಪುಟಕ್ಕೆ)

# ಸಂವಿಧಾನದಿಂದ ಎಲ್ಲಾ ಸಮುದಾಯಕ್ಕೆ ನ್ಯಾಯ

## ಸಂವಿಧಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಬಸವಂತಪ್ಪ

ದಾವಣಗೆರೆ, ನ.26- ಸಂವಿಧಾನದಿಂದ ಎಲ್ಲಾ ಸಮುದಾಯದವರಿಗೆ ನ್ಯಾಯ ಸಿಗಲಿದ್ದು, ಈ ಹಿನ್ನಲೆಯಲ್ಲಿ ವಿವಿಧತೆಯಲ್ಲಿಯೂ ಏಕತೆಯನ್ನು ಕಾಪಾಡಿಕೊಳ್ಳಲಾಗಿದೆ ಎಂದು ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ನಗರದ ಗಾಜಿನ ಮನೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಷ್ಟ್ರವು ಜಾತ್ಯತೀತ, ಸಾಮರಸ್ಯ ದೇಶವಾಗಲು ಸಂವಿಧಾನದಡಿ ಆಡಳಿತ ನಡೆಸಿದಾಗ ಮಾತ್ರ ಸಾಧ್ಯವಾಗಲಿದೆ. ಸಂವಿಧಾನ ದಿನಾಚರಣೆ ಅಂಗವಾಗಿ ಸಂವಿಧಾನ ಪೀಠಿಕೆಯನ್ನು ವಾಚಿಸಲಾಗುತ್ತಿದೆ. ಸಂವಿಧಾನ ಪೀಠಿಕೆ ಓದಿದರೆ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಬಹುದಾಗಿದೆ ಎಂದರು.



ಎಲ್ಲಾ ಧರ್ಮಗಳ ಮೇರು ಗ್ರಂಥವಾಗಿದ್ದು ಸಮಾಜದಲ್ಲಿ ಶಾಂತಿ ಇರಬೇಕೆಂದರೆ ಸಂವಿಧಾನದ ಮಹತ್ವವನ್ನು ಎಲ್ಲರೂ ಅರಿತುಕೊಳ್ಳಬೇಕಾಗಿದೆ. ಅಂತಹ ಸಂವಿಧಾನವನ್ನು ಬರೆದವರು ಬಾಬಾ ಸಾಹೇಬ್ ಅಂಬೇಡ್ಕರ್ ಅವರಾಗಿದ್ದು, ಅವರ ಅನುಯಾಯಿಗಳಾದವರು ಎಂದಿಗೂ ಭ್ರಷ್ಟರಾಗದೇ ಪ್ರಾಮಾಣಿಕರಾಗಿರಬೇಕು ಎಂದರು. ಪ್ರಗತಿ ಮತ್ತು ಸಮೃದ್ಧಿಯ ಹಾದಿಯಲ್ಲಿ ಸಾಗಲು ದಾರಿದೀಪವಾಗಿದೆ. ದೂರದೃಷ್ಟಿ ಹೊಂದಿದ್ದ ನಮ್ಮ ಸಂವಿಧಾನದ ಶಿಲ್ಪಿಗಳು ಭಾರತದ (2ನೇ ಪುಟಕ್ಕೆ)

## ಯತ್ನಾಳ್ ವಿರುದ್ಧ ಕ್ರಮ ಕೈಗೊಳ್ಳಲು ವಿಜಯೇಂದ್ರ ಮನವಿ

ಬೆಂಗಳೂರು, ನ. 26 - ಪಕ್ಷದ ತೀರ್ಮಾನ ವಿರೋಧಿಸಿ ಹೋರಾಟ ನಡೆಸುತ್ತಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಂಡದ ವಿರುದ್ಧ ಕ್ರಮ ಜರುಗಿಸುವಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವರಿಷ್ಠರಿಗೆ ಮನವಿ ಮಾಡಿದ್ದಾರೆ.

ರಾಜ್ಯದ ಉಸ್ತುವಾರಿ ಹೊಣೆ ಹೊತ್ತ ರಾಧಾಮೋಹನ್ ದಾಸ್ ಅವರಿಗೆ ಈ ನಾಯಕರ ನಡವಳಿಕೆ, ವರ್ತನೆ, ಹೇಳಿಕೆಗಳು ಹಾಗೂ ವಕ್ಫ್ ವಿಚಾರದಲ್ಲಿ ಪ್ರತ್ಯೇಕ ಪಾದಯಾತ್ರೆ ಕೈಗೊಂಡಿರುವುದರ ವಿರುದ್ಧ ಕಿಡಿಕಾರಿ, ಪಕ್ಷದ ಶಿಸ್ತು ಉಳಿಸುವಂತೆ ಕೋರಿದ್ದಾರೆ.


ಇದೇ ವೇಳೆ ಕಾರ್ಯಕರ್ತರಿಗೆ ಎರಡು ಪುಟಗಳ ಪತ್ರ ಬರೆದು, ಪಕ್ಷದಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು ಮುಕ್ತ ಅವಕಾಶವಿದೆ. ಅದೇ ರೀತಿ ಶಿಸ್ತು, ಸಂಯಮಗಳು ಎಲ್ಲೆ (2ನೇ ಪುಟಕ್ಕೆ)

# ಪ್ಯಾನ್ ಕಾರ್ಡ್‌ಗಳಿಗೆ ಕ್ಯೂ.ಆರ್. ಕೋಡ್

ನವದೆಹಲಿ, ನ. 26 – ಈಗಿರುವ ಪ್ಯಾನ್ ಕಾರ್ಡ್‌ಗಳಿಗೆ ಕ್ಯೂ.ಆರ್. ಕೋಡ್ ಸೇರಿಸುವುದೂ ಸೇರಿದಂತೆ ಸಮಗ್ರ ಬದಲಾವಣೆ ತರುವ 1,435 ಕೋಟಿ ರೂ. ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ತೆರಿಗೆದಾರರಿಗೆ ಉಚಿತವಾಗಿ ಕ್ಯೂ.ಆರ್. ಕೋಡ್ ಹೊಂದಿರುವ ಪ್ಯಾನ್ ಕಾರ್ಡುಗಳು ದೊರೆಯಲಿವೆ.

ಸರ್ಕಾರದ ಎಲ್ಲಾ ಸಂಸ್ಥೆಗಳ ಡಿಜಿಟಲ್ ವ್ಯವಸ್ಥೆಗಳಲ್ಲಿ ಪ್ಯಾನ್ ಅನ್ನು ಸಾಮಾನ್ಯ ವಹಿವಾಟು ಗುರುತಿನ ಚೀಟಿ ಮಾಡಲು ಸರ್ಕಾರ ಪ್ಯಾನ್ 2.0 ಯೋಜನೆ ರೂಪಿಸಿದೆ.

ವ್ಯಕ್ತಿಗಳು ಹಾಗೂ ಸಂಸ್ಥೆಗಳು ಈಗ ಹೊಂದಿರುವ ಪ್ಯಾನ್ ಸಂಖ್ಯೆ ಮುಂದುವರೆಯಲಿದೆ. ಪ್ಯಾನ್ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ (2ನೇ ಪುಟಕ್ಕೆ)





## ಕ್ರಿಕೆಟ್ ಪಂದ್ಯಾವಳಿಗೆ ಎಸ್ಸೆಸ್ ಚಾಲನೆ

ದಾವಣಗೆರೆ, ನ.26- ಆರು ದಿನಗಳ ಅಂತರ ರಾಷ್ಟ್ರ ಮಟ್ಟದ ಹೊನಲು - ಬೆಳಕಿನ 'ಶಾಮನೂರು ಡೈಮಂಡ್ ಶಿವಗಂಗಾ ಕಪ್ -2024' ಲೀಗ್ ಕಂ ನಾಕೌಟ್ ಕ್ರಿಕೆಟ್ ಪಂದ್ಯಾವಳಿಯು ಇಂದಿಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ಆರಂಭವಾಯಿತು.

ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಅವರ ಸ್ಮರಣಾರ್ಥ ಏರ್ಪಾಡಾಗಿರುವ ಈ ಪಂದ್ಯಾವಳಿಯನ್ನು ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಬ್ಯಾಟ್ ಬೀಸುವುದರ ಮೂಲಕ ಉದ್ಘಾಟಿಸಿ ಶುಭ ಹಾರೈಸಿದರು.

ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಮಹಾನಗರ ಪಾಲಿಕೆ ಮಹಾಪೌರರಾದ ಕೆ.ಚಮನ್ ಸಾಬ್, ಉಪ ಮಹಾಪೌರರಾದ ಸೋಗಿ ಶಾಂತಕುಮಾರ್, ಜಿಲ್ಲಾಧಿಕಾರಿ ಡಾ. ಗಂಗಾಧರ ಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್, ಉದ್ಯಮಿ ಶಿವಗಂಗಾ ಶ್ರೀನಿವಾಸ್, ಜಿಲ್ಲಾ ಕ್ರೀಡಾ ಪಟುಗಳ ಸಾಂಸ್ಕೃತಿಕ ಸಂಘದ ಸಹ ಕಾರ್ಯದರ್ಶಿ ಜಯಪ್ರಕಾಶ್ ಗೌಡ ಮತ್ತು ಇತರರು ಈ ಸಂದರ್ಭದಲ್ಲಿದ್ದರು.



# ಕೊಮಾರನಹಳ್ಳಿ ಕೆರೆಯಲ್ಲಿ ನಾಡಿದ್ದು ವೈಭವದ ದೀಪೋತ್ಸವ, ತೆಪ್ಪೋತ್ಸವ

## 3ನೇ ಬಾರಿಗೆ ನಡೆಯುತ್ತಿರುವ ತೆಪ್ಪೋತ್ಸವಕ್ಕೆ 30 ಸಾವಿರ ಜನ ಭಾಗಿಯಾಗುವ ನಿರೀಕ್ಷೆ

ಮಲೇಬೆನ್ನೂರು, ನ. 26 - ಕೊಮಾರನಹಳ್ಳಿ ಗ್ರಾಮದ ಹೆಳವನ ಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ದೀಪೋತ್ಸವ ಮತ್ತು ತೆಪ್ಪೋತ್ಸವ ಇದೇ ದಿನಾಂಕ 29 ರಂದು ವೈಭವದೊಂದಿಗೆ ಜರುಗಲಿದೆ ಎಂದು ಸುರೇಶ್ ಶಾಸ್ತ್ರಿ ಮತ್ತು ಐರಣಿ ಅಣ್ಣಪ್ಪ ತಿಳಿಸಿದರು.

ಕೊಮಾರನಹಳ್ಳಿಯ ಶ್ರೀ ಲಕ್ಷ್ಮಿ ರಂಗನಾಥ ಸಮುದಾಯ ಭವನದಲ್ಲಿ ಮಂಗಳವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದು, ಇದೇ ದಿನಾಂಕ 29 ರ ಶುಕ್ರವಾರ ಮಧ್ಯಾಹ್ನ 12 ಗಂಟೆಯಿಂದ ತಡರಾತ್ರಿಯವರೆಗೂ ಸಮುದಾಯ ಭವನದಲ್ಲಿ ಸುಮಾರು 30 ಸಾವಿರ ಜನರಿಗೆ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಲಾಗುವುದು.

ಅಂದು ಮಧ್ಯಾಹ್ನ 3 ಗಂಟೆಯಿಂದ ಕೊಮಾರನಹಳ್ಳಿ ಗ್ರಾಮದಿಂದ ಕೆರೆಯವರೆಗೆ ಬೃಹತ್ ಶೋಭಾಯಾತ್ರೆಯನ್ನು ವಿವಿಧ ಕಲಾ ತಂಡಗಳೊಂದಿಗೆ ಹಮ್ಮಿಕೊಂಡಿದ್ದು, ಸಂಜೆ 6 ಗಂಟೆಯಿಂದ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ದೇವಸ್ಥಾನದಲ್ಲಿ ದೀಪೋತ್ಸವ ಮತ್ತು ಕೆರೆಯಲ್ಲಿ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ತೆಪ್ಪೋತ್ಸವ ನಡೆಯಲಿದೆ.

ಕೊಮಾರನಹಳ್ಳಿ, ಮಲೇಬೆನ್ನೂರು, ಹರಳಹಳ್ಳಿ, ದಿಬ್ಬದಹಳ್ಳಿ, ಎರೇಹಳ್ಳಿ, ಹಾಲಿವಾಣ, ಕೊಪ್ಪ, ತಿಮ್ಲಾಪುರ ಗ್ರಾಮಗಳ ಗ್ರಾಮ ದೇವತೆಗಳ ಸಮ್ಮುಖದಲ್ಲಿ ಮತ್ತು ಭಕ್ತಾದಿಗಳ ಸಹಕಾರದೊಂದಿಗೆ 3ನೇ ಬಾರಿಗೆ ಈ ತೆಪ್ಪೋತ್ಸವ ಆಯೋಜಿಸಲಾಗಿದೆ ಎಂದು ಸುರೇಶ್ ಶಾಸ್ತ್ರಿ ಮಾಹಿತಿ ನೀಡಿದರು.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕ ಬಿ.ಪಿ. ಹರೀಶ್, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಶಾಸಕರಾದ ಎಸ್. ರಾಮಪ್ಪ, ಹೆಚ್. ಎಸ್. ಶಿವಶಂಕರ್ ಸೇರಿದಂತೆ ಜಿಲ್ಲೆಯ ಎಲ್ಲಾ ಹಾಲಿ, ಮಾಜಿ ಶಾಸಕರಿಗೆ ಆಮಂತ್ರಣ ನೀಡಲಾಗಿದೆ ಎಂದು ಐರಣಿ ಮಹೇಶ್ವರಪ್ಪ ತಿಳಿಸಿದರು.

1951 ರಲ್ಲಿ ಶ್ರೀ ರಂಗನಾಥ ಆಶ್ರಯದಲ್ಲಿ ಶ್ರೀ ಶಂಕರಲಿಂಗ ಭಗವಾನರ ನೇತೃತ್ವದಲ್ಲಿ ಪ್ರಪ್ರಥಮ ಬಾರಿಗೆ ಕೆರೆಯಲ್ಲಿ ತೆಪ್ಪೋತ್ಸವ ಆಚರಣೆಗೆ ಮಾಡಲಾಗಿತ್ತೆಂದು ಹಿರಿಯರು ಹೇಳಿದ್ದಾರೆ. ನಂತರ 2009ರಲ್ಲಿ ಸರ್ವ ದೇವತೆಗಳ ಸಮ್ಮುಖದಲ್ಲಿ ಭಕ್ತರ ಸಹಕಾರದೊಂದಿಗೆ ವಿಜೃಂಭಣೆಯಿಂದ 2ನೇ ಬಾರಿಗೆ ತೆಪ್ಪೋತ್ಸವ ನಡೆಸಿದ್ದೆವು ಎಂದು ಗ್ರಾಮದ ರಾಮಣ್ಣ ಸ್ವಾಮಿ ಹೇಳಿದರು.

ಈ ಬಾರಿಯ ತೆಪ್ಪೋತ್ಸವಕ್ಕೆ ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಭಕ್ತರು ಭಾಗವಹಿಸುವ ನಿರೀಕ್ಷೆಯಿದ್ದು ಎಲ್ಲಾ ಸಿದ್ಧತೆಗಳನ್ನು ಪೂರ್ಣಗೊಳಿಸದ್ದೇವೆ. ಕೆರೆಯಲ್ಲಿ ದೀಪ ಸೇವೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಗ್ರಾಮದ ಮಡಿವಾಳರ ಬಸವರಾಜ್ ತಿಳಿಸಿದರು.

ಕೆರೆಯಲ್ಲಿ ನೀರಿನ ಮಟ್ಟ ಹೆಚ್ಚಾಗಿರುವುದರಿಂದ ತೆಪ್ಪೋತ್ಸವದ ವೇಳೆ ಯಾರು ಕೆರೆಗೆ ಇಳಿಯಬಾರದೆಂದು ಐರಣಿ ಅಣ್ಣಪ್ಪ ಮನವಿ ಮಾಡಿದರು.

ಶೋಭಾಯಾತ್ರೆ ವೇಳೆ ಮತ್ತು ತೆಪ್ಪೋತ್ಸವದ ವೇಳೆ ಶಿವಮೊಗ್ಗ ರಸ್ತೆಯಲ್ಲಿ ವಾಹನಗಳ ಸಂಚಾರವನ್ನು ಬದಲಿ ಮಾರ್ಗದಲ್ಲಿ ಮಾಡುವಂತೆ ಪಿಎಸ್ಐ ಪ್ರಭು ಕೆಳಗಿನಮನೆ ಅವರಿಗೆ ಮನವಿ ಮಾಡಲಾಗಿದೆ ಎಂದು ಗ್ರಾಮದ ಎಸ್.ಎಂ.ಮಂಜುನಾಥ್ ತಿಳಿಸಿದರು.

ಸಿ. ರಂಗನಾಥ್, ನವೀನ್ ಪಾಟೀಲ್, ದಾನಪ್ಪ ಅರುಣ್, ಜಿ. ರಂಗಪ್ಪ, ದಿಬ್ಬದಹಳ್ಳಿ ಓಂಕಾರಪ್ಪ, ಐರಣಿ ಮೂರ್ತಿ, ಧರ್ಮರಾವ್, ಎಸ್.ಹೆಚ್. ಹಾಲೇಶ್, ಯು. ನಾಗಣ್ಣ, ಎಂ.ಎಂ. ಗೌಡ್ರು, ಎ.ವಿ. ವೀರೇಶ್, ಧನರಾಜ್, ಎ. ನಾಗರಾಜ್, ಎನ್., ಮಂಜುನಾಥ, ಯು. ಅಣ್ಣಪ್ಪ ಸೇರಿದಂತೆ ಕೊಮಾರನಹಳ್ಳಿ ಗ್ರಾಮಸ್ಥರು ಸುದ್ದಿಗೋಷ್ಠಿಯಲ್ಲಿದ್ದರು.

ಬೋಟ್ ವ್ಯವಸ್ಥೆ ತೆಪ್ಪೋತ್ಸವದ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ ಕೊಮಾರನಹಳ್ಳಿ ಕೆರೆಗೆ ಬೇಟಿ ನೀಡಿದ್ದ ಪ್ರವಾಸೋದ್ಯಮ ಇಲಾಖೆಯ ಕಾವ್ಯ ಅವರು ತೆಪ್ಪೋತ್ಸವದ ಬಗ್ಗೆ ಮಾಹಿತಿ ಪಡೆದುಕೊಂಡು ಸಿದ್ಧತೆ ಪರಿಶೀಲಿಸಿದರು.

ತೆಪ್ಪೋತ್ಸವದ ದಿನ ಪ್ರವಾಸೋದ್ಯಮ ಇಲಾಖೆಯಿಂದ ಬೋಟ್ ಸೌಲಭ್ಯ ಕಲ್ಪಿಸಲಾಗುವುದೆಂದು ತಿಳಿಸಿದರು.

# ಪರಿಶಿಷ್ಟ ಜಾತಿ ರೈತರಿಂದ ಅರ್ಜಿ

ಹರಿಹರ

ಹರಿಹರ, ನ.26- ತಾಲ್ಲೂಕಿನ ತೋಟಗಾರಿಕೆ ಇಲಾಖೆಯಿಂದ 2025-26ನೇ ಸಾಲಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಹೊಸದಾಗಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ನರೇಗಾದಡಿ ಸಣ್ಣ, ಅತಿ ಸಣ್ಣ ರೈತರು ಇದೇ ದಿನಾಂಕ 30 ರೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಗೆ ಅಥವಾ ಆಯಾ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಬಹುದು.

# ಸಚಿವರು ತ್ಯಾಗಕ್ಕೆ ಸಿದ್ಧರಾಗಿ ಎಂದ ಡಿಕೆಶಿ

ಬೆಂಗಳೂರು, ನ. 26 – ಮುಂದಿನ ದಿನಗಳಲ್ಲಿ ಸಂಪುಟ ಪುನರ್‌ರಚನೆಯಾಗುವ ಸೂಚನೆ ನೀಡಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೆಲ ಸಚಿವರಿಗೆ ಅವರ ಅವಧಿಯ ಬಗ್ಗೆ ಈಗಾಗಲೇ ತಿಳಿಸಲಾಗಿದೆ ಎಂದಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಭಾರತದ ಸಂವಿಧಾನ ಅಂಗೀಕಾರ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷಕ್ಕೆ ತ್ಯಾಗದ ಇತಿಹಾಸವೇ ಇದೆ. ಸೋನಿಯಾ ಗಾಂಧಿ ಅವರು ಪ್ರಧಾನಿಯಾಗುವ ಅವಕಾಶವನ್ನು ಎರಡು ಬಾರಿ ನಿರಾಕರಿಸಿದರು. ಸಮಯ ಬಂದಾಗ ನಮ್ಮ ಸರ್ಕಾರದ ಸಚಿವರೂ ತಮ್ಮ ಸ್ಥಾನದ ತ್ಯಾಗಕ್ಕೆ ಸಿದ್ಧರಿರಬೇಕು ಎಂದು ಹೇಳಿದರು.

ಪಂಚಾಯ್ತಿ ಅಧ್ಯಕ್ಷರ ಅವಧಿಯನ್ನು ಎರಡು ವರ್ಷಗಳಿಗೆ ನಿಗದಿ ಪಡಿಸಲಾಗಿರುತ್ತದೆ. ನಂತರ ಅವರು ಅಧಿಕಾರ ತೊರೆಯಬೇಕು ಎಂದು ತಿಳಿಸಲಾಗುತ್ತದೆ. ಅದೇ ರೀತಿಯ ಸಂದೇಶವನ್ನು ಕೆಲ ಸಚಿವರಿಗೂ ನೀಡಲಾಗಿದೆ ಎಂದರು. ಆದರೆ, ಅವಧಿ ಮುಗಿದ ನಂತರ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನೇ ಅಧಿಕಾರದಿಂದ ಕೆಳಗೆ ಇಳಿಸಲು ಹರಸಾಹಸ ಮಾಡಬೇಕಿದೆ. ಮಹಾತ್ಮ ಗಾಂಧಿ, ಸೋನಿಯಾ, ರಾಹುಲ್ ಗಾಂಧಿ ಅವರಂತೆ ಎಲ್ಲರೂ ಯೋಚಿಸಬೇಕು. ಆಗ ಮಾತ್ರ ಪಕ್ಷಕ್ಕೆ ಬಲ ತುಂಬಲು ಸಾಧ್ಯ ಎಂದರು.

ಕಾರ್ಯಕ್ರಮದ ನಂತರ ಪತ್ರಕರ್ತರು ಈ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಸಚಿವರು ತಕ್ಷಣಕ್ಕೆ ತಮ್ಮ ಸ್ಥಾನ ಬಿಡಬೇಕು ಎಂದು ಹೇಳಿಲ್ಲ. ತ್ಯಾಗಕ್ಕೆ ಸಿದ್ಧವಿರಬೇಕು ಎಂದು ಕಿವಿಮಾತು ಹೇಳಿದ್ದೇನೆ. ಅದಕ್ಕೆ ಇನ್ನೂ ಸಮಯಾವಕಾಶವಿದೆ ಎಂದು ತಿಳಿಸಿದರು.

ಸಚಿವ ಸಂಪುಟ ಪುನರ್‌ರಚನೆ ವಿಚಾರ ಗೊತ್ತಿಲ್ಲ. ಗೊತ್ತಾದಾಗ ಮಾತನಾಡುತ್ತೇನೆ. ಈ ಕುರಿತು ಹೆಚ್ಚಿನ ಮಾಹಿತಿಗೆ ಮುಖ್ಯಮಂತ್ರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳನ್ನೇ ಕೇಳಿ ಎಂದರು. ಶೀಘ್ರದಲ್ಲೇ ಸಂಪುಟ ಪುನರ್‌ರಚನೆ ನಡೆಯಲಿದೆ ಎಂಬ ಸುದ್ದಿಗಳು ಹರಡಿವೆ. ಈ ನಡುವೆಯೇ, ಶಿವಕುಮಾರ್ ನೀಡಿರುವ ಹೇಳಿಕೆ ಪ್ರಾಮುಖ್ಯತೆ ಪಡೆದುಕೊಂಡಿದೆ.

# ಸಂವಿಧಾನದಿಂದ ಎಲ್ಲಾ ಸಮುದಾಯಕ್ಕೆ ನ್ಯಾಯ

**(1ನೇ ಪುಟದಿಂದ)** ರಾಷ್ಟ್ರೀಯತೆಯ ಮೇಲೆ ಸಂಪೂರ್ಣ ವಿಶ್ವಾಸ ಹೊಂದಿದ್ದರು ಎಂಬುದನ್ನು ಇದು ತೋರಿಸುತ್ತದೆ. ಸಂವಿಧಾನದ ಮೂಲಕ ವಿಶ್ವದ ಅತಿ ದೊಡ್ಡ ಮತ್ತು ಯಶಸ್ವಿ ಪ್ರಜಾಪ್ರಭುತ್ವ ಎಂಬ ಗೌರವ ನಮಗಿದೆ ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಮೇಯರ್ ಚಮನ್ ಸಾಬ್ ಕೆ ಮಾತನಾಡಿ. ಸಂವಿಧಾನ ಇಲ್ಲದೆ ದೇಶ ಮುನ್ನಡೆಯಲು ಅಸಾಧ್ಯ, ಡಾ.ಬಿ.ಆರ್ ಅಂಬೇಡ್ಕರ್ ಅವರು ದೇಶ-ವಿದೇಶಗಳಿಗೆ ಹೋಗಿ ಓದಿಕೊಂಡು ನಮಗೆ ಉತ್ತಮವಾದ ಸಂವಿಧಾನವನ್ನು ನೀಡಿದ್ದಾರೆ. ಅವರು ಎಲ್ಲಾ ಧರ್ಮಗಳ ಒಳಿತಿಗಾಗಿ ಸಂವಿಧಾನವನ್ನು ಬರೆದಿದ್ದಾರೆ ಎಂದು ತಿಳಿಸಿದರು.

ದೂಡಾ ಅಧ್ಯಕ್ಷರಾದ ದಿನೇಶ್ ಕೆ.ಶೆಟ್ಟಿ ಮಾತನಾಡಿ, ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಿದೆ ಎಂದರೆ ಅದಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ್ ಬರೆದಿರುವಂತಹ ಸಂವಿಧಾನ ಕಾರಣ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಮಾತನಾಡಿ, ಅನೇಕ ಹೋರಾಟಗಳ ಮೂಲಕ ದೇಶ ಸ್ವಾತಂತ್ರ್ಯ ಹೊಂದಿತು. ಈ ಅವಧಿಯಲ್ಲಿ ಬ್ರಿಟಿಷರು ಅನೇಕ ಕಾನೂನು, ಕಾಯಿದೆಗಳನ್ನು ಜಾರಿಗೆ ತಂದರು. ಜಾತ್ಯತೀತ ದೇಶದಲ್ಲಿ ಎಲ್ಲರನ್ನೂ ಒಳಗೊಳ್ಳುವ ಸಂವಿಧಾನವನ್ನು ಡಾ; ಬಿ. ಆರ್.ಅಂಬೇಡ್ಕರ್ ರವರು ಬರೆದಿದಿದ್ದು ಪ್ರಪಂಚದಲ್ಲಿ ಮಾದರಿಯಾಗಿದೆ ಎಂದರು.

ನಿವೃತ್ತ ಕೆ.ಎ.ಎಸ್ ಅಧಿಕಾರಿ ರುದ್ರಪ್ಪ ಹನಗವಾಡಿ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸದಸ್ಯರಾದ ಪ್ರೊ. ಮಲ್ಲಿಕಾರ್ಜುನ್ ಆರ್ ಹಲಸಂಗಿ ಉಪನ್ಯಾಸ ನೀಡಿದರು.

ಪಾಲಿಕೆ ಉಪ ಮೇಯರ್ ಸೋಗಿ ಶಾಂತಕುಮಾರ್, ಆಯುಕ್ತರಾದ ರೇಣುಕಾ, ಸದಸ್ಯರಾದ ಮಂಜುನಾಥ ಗಡಿಗುಡಾಳ್, ಪಾಲಿಕೆ ಸದಸ್ಯರಾದ ಸವಿತಾ ಹುಲ್ಲುಮನಿ, ಸುಧಾ ಇಟ್ಟಿಗುಡಿ ಮಂಜುನಾಥ್, ಮೀನಾಕ್ಷಿ ಜಗದೀಶ್, ಗೋಣಪ್ಪ, ಆಶಾ ಉಮೇಶ್, ನಿವೃತ್ತ ಪ್ರಾಧ್ಯಾಪಕರಾದ ಎ.ಬಿ.ರಾಮಚಂದ್ರಪ್ಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ದಿಂಡಿ ಉತ್ಸವ

ನಾಮದೇವ ಸಿಂಪಿ ಸಮಾಜದಿಂದ 99ನೇ ಶ್ರೀ ಪಾಂಡುರಂಗ ವಿಠ್ಠಲ ರುಕ್ಮಿಣಿ ದಿಂಡಿ ಮಹೋತ್ಸವ ನಡೆಯುತ್ತಿದ್ದು, ಇಂದು ಸಭಾ ಕಾರ್ಯಕ್ರಮ ಏರ್ಪಾಡಾಗಿದೆ ಎಂದು ನಾಮದೇವಿ ಸಿಂಪಿ ಸಮಾಜ ದೈವ ಮಂಡಳಿಯ ಅಧ್ಯಕ್ಷ ವಿಠ್ಠಲ್ ಎಂ.ಎಸ್. ತಿಳಿಸಿದ್ದಾರೆ. ರಾಜನಹಳ್ಳಿ ಹನುಮಂತಪ್ಪ ಧರ್ಮಶಾಲೆಯಲ್ಲಿ ಬೆಳಿಗ್ಗೆ 9 ರಿಂದ ರಂಗೋಲಿ, ಸಾಂಸ್ಕೃತಿಕ, ವೇಷ ಭೂಷಣ ಸ್ಪರ್ಧೆ, ಭಕ್ತಿಗೀತೆ ಸ್ಪರ್ಧೆ, ನೃತ್ಯ ಕಾರ್ಯಕ್ರಮಗಳು ನಡೆಯಲಿವೆ.

12.30ರಿಂದ ಸಭಾ ಕಾರ್ಯಕ್ರಮ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ದೂಡ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

# ನಗರದಲ್ಲಿ ಇಂದು ರಥೋತ್ಸವ

ಮಹಾರಾಜ ಪೇಟೆ ವಿಠ್ಠಲ ಮಂದಿರ ದಲ್ಲಿ ಇಂದಿನಿಂದ ನಾಲ್ಕು ದಿನಗಳ ಕಾಲ ಶ್ರೀ ವಿಠ್ಠಲ ರುಖುಮಾಯಿ ದೇವರ ಮತ್ತು ಶ್ರೀ ಸಂತ ಜ್ಞಾನೇಶ್ವರ ಮಹಾರಾಜ ಸಂಜೀವಿನಿ ಸಮಾಧಿ ಸೋಹಳ ಮಹೋತ್ಸವ ನಡೆಯಲಿದ್ದು, ಇಂದು ಸಂಜೆ 5ಕ್ಕೆ ಪೋತಿ ಸ್ಥಾಪನೆ, ನಗರ ಪ್ರದಕ್ಷಿಣೆ, ಧ್ವಜ ಪೂಜೆ, ರಾತ್ರಿ 8 ಕ್ಕೆ ಸುನಿಲ್ ಜಮಖಂಡಿ ಕೀರ್ತನೆ, ಜಾಗರಣೆ ಇರುತ್ತದೆ.

ಇಂದು ಬೆಳಿಗ್ಗೆ 05ಕ್ಕೆ ಕಾಕಡಾರತಿ, ಭಜನೆ, ಪಾರಾಯಣ, ಹರಿಪಾಠ, 9 ಕ್ಕೆ ರಥೋತ್ಸವ, ದಿಂಡಿ ಉತ್ಸವ, 12 ಕ್ಕೆ ಶ್ರೀ ಸಂತ ಪೂಜಾ, 12.30 ಕ್ಕೆ ಕಲಾವತಿ ಮಹಿಳಾ ಮಂಡಳಿ ಇವರಿಂದ ಪಾವುಲ್ ಭಜನೆ, ಮಹಾಮಂಗಳಾರತಿ 1.15 ಕ್ಕೆ ಅಭಿನಂದನಾ ಕಾರ್ಯಕ್ರಮ, ಶ್ರೀ ಸಂತ ಸಮಾರಾಧನೆ.

# ನಗರದಲ್ಲಿ ಇಂದಿನಿಂದ 'ಶಿಲ್ಪಕಲಾ' ಪ್ರದರ್ಶನ

ದಾವಣಗೆರೆ, ನ. 26- ದೃಶ್ಯಕಲಾ ಮಹಾವಿದ್ಯಾಲಯದ ಶಿಲ್ಪಕಲಾ ವಿದ್ಯಾರ್ಥಿಗಳಿಂದ 'ಶಿಲ್ಪಕಲಾ' ಶೀರ್ಷಿಕೆಯಡಿ ಸಮಕಾಲೀನ ಸಮೂಹ ಶಿಲ್ಪಕಲಾ ಪ್ರದರ್ಶನವನ್ನು ನಾಳೆ ದಿನಾಂಕ 27ರಿಂದ ಬರುವ ಡಿಸೆಂಬರ್ 6ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಉಪನ್ಯಾಸಕ ದತ್ತಾತ್ರೇಯ ಎನ್. ಭಟ್ ಹೇಳಿದರು.

ನಾಳೆ ಬುಧವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಪ್ರದರ್ಶನ ಉದ್ಘಾಟಿಸಲಿದ್ದಾರೆ.

ರಾಜ್ಯ ವಿವಿ ಹಾಗೂ ಕಾಲೇಜು ಅಧ್ಯಾಪಕರ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ.ಸಿ.ಹೆಚ್. ಮುರಿಗೇಂದ್ರಪ್ಪ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಚಾರ್ಯ, ಡಾ.ಜೈರಾಜ ಎಂ. ಚಿಕ್ಕಪಾಟೀಲ್, ಐ.ಕ್ಯೂ.ಎ.ಸಿ. ಸಂಯೋಜನಾಧಿಕಾರಿ ಡಾ.ಸತೀಶಕುಮಾರ್ ಪಿ.ವಲ್ಲೇಪುರಿ ಉಪಸ್ಥಿತರಿರುವರು.

ಕಲಾವಿದರುಗಳಾದ ಡಾ.ಎಂ.ಕೆ. ಗಿರೀಶ್ ಕುಮಾರ್, ನವೀನ್ ಕುಮಾರ್ ಎ., ಓಂಕಾರಮೂರ್ತಿ ಜಿ.ಬಿ. ಈ ಸಂದರ್ಭದಲ್ಲಿದ್ದರು.

# ನವೀಕೃತ ತಾಲ್ಲೂಕು ಕಚೇರಿ ಉದ್ಘಾಟನೆಗೆ ಆಗ್ರಹಿಸಿ ವಿಕರವೇ ಪ್ರತಿಭಟನೆ




ದಾವಣಗೆರೆ, ನ. 26- ನವೀಕರಣಗೊಂಡಿರುವ ತಾಲ್ಲೂಕು ಕಚೇರಿಯನ್ನು ಕೂಡಲೇ ಉದ್ಘಾಟಿಸುವಂತೆ ಆಗ್ರಹಿಸಿ ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಜಯದೇವ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಇದೇ ವೇಳೆ ಮಾತನಾಡಿದ ಪ್ರತಿಭಟನಾಕಾರರು, ತಾಲ್ಲೂಕು ಕಚೇರಿಯ ಕಟ್ಟಡ ಕಾಮಗಾರಿ ಆರಂಭಿಸಿ 8 ವರ್ಷಗಳಾಗಿವೆ. ಕಳೆದ ಎರಡು ವರ್ಷಗಳ ಹಿಂದೆ ಕಟ್ಟಡ ಕಾಮಗಾರಿ ಪೂರ್ಣಗೊಂಡಿದೆ. ಪೀಠೋಪಕರಣಗಳನ್ನು ಕೂಡ ಕಟ್ಟಡದಲ್ಲಿ ಅಳವಡಿಸಲಾಗಿದೆ. ಆದರೆ ಇದುವರೆಗೂ ಸಾರ್ವಜನಿಕರ ಉಪಯೋಗಕ್ಕೆ ಬಿಡುಗಡೆ ಮಾಡದೇ ಬಾಡಿಗೆ ಕಟ್ಟಡ ರೈತ ಭವನದಲ್ಲಿ ಇನ್ನೂ ಬಾಡಿಗೆ ಪಾವತಿಸುತ್ತಾ ಹಣ ವ್ಯರ್ಥಮಾಡುತ್ತಾ ಇದ್ದಾರೆಂದು ಆರೋಪಿಸಿದರು.

ಉದ್ಘಾಟನೆಯಾಗದೇ ಇರುವ ಈ ನೂತನ ಕಟ್ಟಡ ಅನೈತಿಕ ಚಟುವಟಿಕೆಗಳ ತಾಣವಾಗುತ್ತಿರುವುದು ವಿಷಾದದ ಸಂಗತಿಯಾಗಿದೆ. ನೂತನ ಕಟ್ಟಡ ಸೋರುತ್ತಿರುವುದು ಕಳಪೆ ಕಾಮಗಾರಿಗೆ ಹಿಡಿದ ಕೈಗನ್ನಡಿಯಾಗಿದೆ. ಕಟ್ಟಡ ಉದ್ಘಾಟನೆಯಾಗದೇ ವಿಳಂಬ ನೀತಿ ಅನುಸರಿಸುತ್ತಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ ಎಂದರು.

ನಗರದ ಹೃದಯಭಾಗದಲ್ಲಿರುವ ಈ ನೂತನ ಕಟ್ಟಡದಿಂದ ಹಳೇ ಭಾಗದ, ಗ್ರಾಮಾಂತರ ಪ್ರದೇಶದ ಜನರಿಗೆ ತುಂಬಾ ಅನುಕೂಲಕರವಾಗಿದೆ. ಇಂತಹ ಸೂಕ್ತ ಸ್ಥಳವನ್ನು ಬಿಟ್ಟು ಬಾಡಿಗೆ ಕಟ್ಟಡದಲ್ಲಿ ಎಷ್ಟು ದಿನ ಇರುವುದು ಎಂಬ ಪ್ರಶ್ನೆ ನಾಗರಿಕರನ್ನು ಕಾಡುತ್ತಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳಾದ ಬಾಬುರಾವ್, ಮಂಜುನಾಥ್, ಇಸ್ಮಾಯಿಲ್, ಜಬೀವುಲ್ಲಾ, ಚಂದ್ರಶೇಖರ್, ಮೆಹಬೂಬ್, ಚಮನ್ ಸಾಬ್, ಗಿರೀಶ್, ರಮೇಶ್, ಸೈಯದ್, ಗಣೇಶ, ಗಣಪ ಮುಂತಾದವರು ಪಾಲ್ಗೊಂಡಿದ್ದರು.

# ರಾಹುಲ್ ಪೌರತ್ವ ಕುರಿತು ವರದಿ ಸಲ್ಲಿಸಲು ಹೈಕೋರ್ಟ್ ಸೂಚನೆ

ಲಖ್ನೌ, ನ. 26 – ಈ ವರ್ಷ ರಾಯ್‌ಬರೇಲಿ ಲೋಕಸಭಾ ಕ್ಷೇತ್ರದಿಂದ ರಾಹುಲ್ ಗಾಂಧಿ ಸ್ಪರ್ಧಿಸುವಾಗ ತಾವು ಬ್ರಿಟನ್ ಪೌರತ್ವ ಹೊಂದಿರುವುದನ್ನು ಮುಚ್ಚಿಟ್ಟಿದ್ದರು ಎಂಬ ದೂರಿನ ಕುರಿತು ತೆಗೆದುಕೊಂಡಿರುವ ನಿರ್ಧಾರವನ್ನು ತನ್ನ ಎದುರು ಸಲ್ಲಿಸುವಂತೆ ಅಲಹಾಬಾದ್ ಹೈಕೋರ್ಟ್ ಕೇಂದ್ರ ಸರ್ಕಾರಕ್ಕೆ ತಿಳಿಸಿದೆ.

ಡಿಸೆಂಬರ್ 19ರ ಒಳಗೆ ಕೇಂದ್ರ ಸರ್ಕಾರ ತನ್ನ ನಿರ್ಧಾರವನ್ನು ಸಲ್ಲಿಸಬೇಕು ಎಂದು ನ್ಯಾಯಮೂರ್ತಿಗಳಾದ ಎ.ಆರ್. ಮಸೂದಿ ಹಾಗೂ ಸುಭಾಷ್ ವಿದ್ಯಾರ್ಥಿ ಅವರನ್ನು ಒಳಗೊಂಡ ಪೀಠ ತಿಳಿಸಿದೆ. ರಾಹುಲ್ ಗಾಂಧಿ ವಿರುದ್ಧ ಕರ್ನಾಟಕದ ಬಿಜೆಪಿ ಕಾರ್ಯಕರ್ತ ಎಸ್. ವಿಗ್ನೇಶ್ ಶಿಶಿರ್ ಎಂಬುವವರು ಅರ್ಜಿ ದಾಖಲಿಸಿದ್ದರು.

ದ್ವಿಪೌರತ್ವ ಹೊಂದುವ ಮೂಲಕ ಭಾರತೀಯ ನ್ಯಾಯ ಸಂಹಿತೆ ಹಾಗೂ ಪಾಸ್‌ಪೋರ್ಟ್ ಕಾಯ್ದೆಯನ್ನು ರಾಹುಲ್ ಗಾಂಧಿ ಉಲ್ಲಂಘಿಸಿದ್ದಾರೆ. ಈ ಬಗ್ಗೆ ಸಿ.ಬಿ.ಐ. ತನಿಖೆ ನಡೆಸಬೇಕು ಎಂದು ಅರ್ಜಿದಾರರು ಒತ್ತಾಯಿಸಿದ್ದರು.

ಅರ್ಜಿದಾರರು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ದೂರು ನೀಡಿದ್ದಾರೆ. ಈ ದೂರು ಪರಿಶೀಲನೆಯಲ್ಲಿದೆ ಎಂದು ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಸ್.ಬಿ. ಪಾಂಡೆ ತಿಳಿಸಿದ್ದರು.

# ನೀಟ್, ಜೆಇಇ ತರಬೇತಿ ನೀಡಿಕೆಯಲ್ಲಿ ತಾರತಮ್ಯ ; ಎಐಡಿಎಸ್‌ಓ ಆಕ್ಷೇಪ

ದಾವಣಗೆರೆ, ನ.26- ಸರ್ಕಾರಿ, ಆದರ್ಶ ವಿದ್ಯಾಲಯ ಹಾಗೂ ಅನುದಾನಿತ ಕಾಲೇಜುಗಳ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಿಇಟಿ, ಜೆಇಇ ಹಾಗೂ ನೀಟ್ ಕೋಚಿಂಗ್ ಕೊಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದೆ. ಆದರೆ, ಈ ವರ್ಷ ಕೇವಲ 25 ಸಾವಿರ ವಿದ್ಯಾರ್ಥಿಗಳಿಗೆ ಮಾತ್ರ ಈ ತರಬೇತಿಯನ್ನು ಸೀಮಿತಗೊಳಿಸಿರುವುದು ವಿದ್ಯಾರ್ಥಿ ವಿರೋಧಿ ನಡೆಯಾಗಿದೆ ಎಂದು ಎಐಡಿಎಸ್‌ಓ ಆಕ್ಷೇಪಿಸಿದೆ.

ರಾಜ್ಯದಲ್ಲಿ ಸಿಇಟಿ ಬರೆಯುವ ಶೇಕಡ 90 ವಿದ್ಯಾರ್ಥಿಗಳನ್ನು ಉಚಿತ ತರಬೇತಿಯಿಂದ ಹೊರಗಿಟ್ಟು ಕೇವಲ ಶೇ. 10 ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಹೊರಟಿದೆ. ಎಸ್ ಎಸ್ ಎಲ್ ಸಿ ತೇರ್ಗಡೆ ಆಧಾರದ ಮೇಲೆ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಪ್ರವೇಶ ಪಡೆದು, ವಿಜ್ಞಾನ ಅಧ್ಯಯನ ನಡೆಸುತ್ತಿರುವ ಎಲ್ಲ ವಿದ್ಯಾರ್ಥಿಗಳು ಈ ತರಬೇತಿಗೆ ಅರ್ಹರು. ಆದರೆ ಸರ್ಕಾರವು ವಿದ್ಯಾರ್ಥಿಗಳ ನಡುವೆ ಅರ್ಹರು, ಅನರ್ಹರು ಎಂಬ ತಾರತಮ್ಯವನ್ನು ಸೃಷ್ಟಿಸುತ್ತಿದೆ. ಭಾರೀ ಮೊತ್ತ ನೀಡಿ ತರಬೇತಿ ಜವಾಬ್ದಾರಿಯನ್ನು ಖಾಸಗೀ ಸಂಸ್ಥೆಯೊಂದಕ್ಕೆ ನೀಡಿರುವುದು ಕೂಡ ಪ್ರಶ್ನಾರ್ಹ ವಿಷಯವಾಗಿದೆ.

ಸರ್ಕಾರವು ಕೂಡಲೇ ಈ ತಾರತಮ್ಯ ವನ್ನು ಕೈಬಿಡಬೇಕು ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ವ್ಯಾಸಂಗ ಮಾಡುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೂ ಉಚಿತ ತರಬೇತಿಯನ್ನು ನೀಡಬೇಕೆಂದು ಎಐಡಿಎಸ್‌ಓ ಆಗ್ರಹಿಸುತ್ತದೆ ಎಂದು ಜಿಲ್ಲಾ ಕಾರ್ಯದರ್ಶಿ ಟಿ. ಎಸ್. ಸುಮನ್ ಹೇಳಿಕೆ ನೀಡಿದ್ದಾರೆ.

# ಶಾಂತಿ, ನೆಮ್ಮದಿಗೆ ಧಾರ್ಮಿಕ ಪ್ರವಚನಗಳು ಅವಶ್ಯ



ರಾಣೇಬೆನ್ನೂರು

ರಾಣೇಬೆನ್ನೂರು, ನ. 26 - ವಿಶ್ವ ಶಾಂತಿಯ ಕಲ್ಯಾಣಾರ್ಥವಾಗಿ ನಗರದ ಶನೇಶ್ವರ ಮಂದಿರದಲ್ಲಿ ನಡೆಯುತ್ತಿರುವ ಅತಿರುದ್ರ ಮಹಾಯಾಗ ಕಾರ್ಯಕ್ರಮದಲ್ಲಿ ಹೆಚ್ಚೆಚ್ಚು ಭಕ್ತರು ಭಾಗವಹಿಸುವುದರ ಮೂಲಕ ಈ ವರ್ಷದ ಶನೇಶ್ವರ ಜಾತ್ರೋತ್ಸವವನ್ನು ಯಶಸ್ವಿಗೊಳಿಸಬೇಕು ಎಂದು ಶ್ರೀ ಮಠದ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಕಳೆದ ಒಂದು ವಾರದಿಂದ ನಗರದ ಹೊರವಲಯದ ಹಿರೇಮಠದ ಶನೇಶ್ವರ ಸ್ವಾಮಿಯ ಮಂದಿರದಲ್ಲಿ ನಡೆಸುತ್ತಿರುವ ಅಷ್ಟಬಂಧ ಬ್ರಹ್ಮ ಕಲಶೋತ್ಸವ ಮಹೋತ್ಸವದ ನಿಮಿತ್ತ ವಿಶ್ವ ಶಾಂತಿ ಹಾಗೂ ಪ್ರಾಚೀನ ಧರ್ಮ ಪರಂಪರೆಯ ಸಂವರ್ಧನೆಯ ಪ್ರವಚನದ ನೇತೃತ್ವ ವಹಿಸಿ ಮಾತನಾಡುತ್ತಿದ್ದರು.

ಆಧುನಿಕತೆಯ ಇಂದಿನ ದಿನಮಾನಗಳಲ್ಲಿ ಮನುಜನಿಗೆ ಆಸ್ತಿ, ಅಂತಸ್ತು, ಹಣ ಎಲ್ಲವೂ ಇದೆ. ಆದರೆ ಶಾಂತಿ, ನೆಮ್ಮದಿ, ಸಮಾಧಾನ, ಸಹನೆ ಮಾತ್ರ ಇಲ್ಲವಾಗಿವೆ. ಇವುಗಳನ್ನು ಪಡೆಯ ಬೇಕಾದರೆ ಧಾರ್ಮಿಕ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ, ಗುರುಗಳ ಉಪದೇಶ, ಪ್ರವಚನಗಳನ್ನು ಆಲಿಸಬೇಕು ಎಂದು ಶ್ರೀಗಳು ಹೇಳಿದರು.

ಬೃಹನ್ಮಠ ನಿಚ್ಚವ್ವನ ಹಳ್ಳಿಯ ಶಿವಯೋಗಿ ಹಾಲಸ್ವಾಮಿಗಳು ಮಾತನಾಡಿ ಕಳೆದ 12 ವರ್ಷಗಳಿಂದ ಶನೇಶ್ವರ ಮಂದಿರದಲ್ಲಿ ಅನೇಕ ದಾಖಲೆಗಳಂತಹ ಕಾರ್ಯಕ್ರಮಗಳನ್ನು ಮಂದಿರದ ಶಿವಯೋಗಿ ಶ್ರೀಗಳು ಮುನ್ನಡೆಸುತ್ತಾ ಬಂದಿದ್ದು, ಈ ವರ್ಷ ನಡೆಯುವ ಶನೇಶ್ವರ ಸ್ವಾಮಿಯ ಜಾತ್ರೆ ಇತಿಹಾಸದ ಪುಟಗಳಲ್ಲಿ ಸೇರಲಿದೆ ಎಂದರು.

ಹಿರೇಕೆರೂರು ಶಾಸಕ ಯು.ಬಿ. ಬಣಕಾರ, ಜಿ.ಪಂ. ಮಾಜಿ ಅಧ್ಯಕ್ಷ ಎಸ್.ಎಸ್. ರಾಮಲಿಂಗಣ್ಣ, ತಾ.ಪಂ. ಮಾಜಿ ಅಧ್ಯಕ್ಷ ರವೀಂದ್ರಗೌಡ ಪಾಟೀಲ, ಸಿದ್ದು ಚಿಕ್ಕಬಿದರಿ, ನಗರ ಹಾಗೂ ಗ್ರಾಮೀಣ ಭಾಗದ ಭಕ್ತರು ಪಾಲ್ಗೊಂಡಿದ್ದರು.

## ಶ್ರೀ ಜಿ.ಬಿ. ಹರಿಯಪ್ಪ ನಿಧನ



ದಾವಣಗೆರೆ ಸಿಟಿ ಶಿವಕುಮಾರ ಸ್ವಾಮಿ ಬಡಾವಣೆ,
2ನೇ ಹಂತದ ವಾಸಿ ದಿ. ಚಂದ್ರಮ್ಮನವರ ಪತಿ

**ಶ್ರೀ ಜಿ.ಬಿ. ಹರಿಯಪ್ಪ**

ಇವರು, ದಿನಾಂಕ : 26.11.2024ರ ಮಂಗಳವಾರ ರಾತ್ರಿ 11.10ಕ್ಕೆ ನಿಧನರಾದರು. ಮೃತರಿಗೆ 73 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ : 27.11.2024ರ ಬುಧವಾರ ಮಧ್ಯಾಹ್ನ 12 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಅಂತ್ಯಕ್ರಿಯೆಯು ಮಧ್ಯಾಹ್ನ 1 ಗಂಟೆಗೆ ಗುಮ್ಮನೂರಿನ ಜಮೀನಿನಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ : ಮಗ : ಚೇತನ್ ಕುಮಾರ್ ಬಿ.ಹೆಚ್. ಅಶ್ವಿನಿ, ಮಗಳು : ವಾಣಿಶ್ರೀ ಬಿ.ಹೆಚ್. ಬಸವರಾಜ ಮತ್ತು ಮೊಮ್ಮಕ್ಕಳು.**

**ಮೊ : 99162 61622, 98866 88484**

# ಯತ್ನಾಳ್ ವಿರುದ್ಧ ಕ್ರಮಕ್ಕೆ ಮನವಿ

**(1ನೇ ಪುಟದಿಂದ)** ಮೀರದಂತೆ ನೋಡಿಕೊಳ್ಳುವ ವ್ಯವಸ್ಥೆಯೂ ನಮ್ಮಲ್ಲಿದೆ ಎಂದಿದ್ದಾರೆ.

ಬಸನಗೌಡ ಪಾಟೀಲ್ ಯತ್ನಾಳ್ ತಂಡದ ಬಗ್ಗೆ ಹೆಸರು ಪ್ರಸ್ತಾಪಿಸದೆ, ಪಕ್ಷದ ಸಂಘಟನೆಗೆ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡೋಣ, ಒಗ್ಗಟ್ಟಿನಿಂದ ಹೊರಗೆ ಕೆಲಸ ಮಾಡುವವರಿಗೆ ಸಹಕಾರ ಬೇಡ ಎಂದು ಹೇಳಿದ್ದಾರೆ.

ಉಪಚುನಾವಣೆ ಫಲಿತಾಂಶಗಳು ಪಕ್ಷ ಸಂಘಟನೆ, ಸಾಮರ್ಥ್ಯ ಹಾಗೂ ಪ್ರಭಾವ ಬಿಂಬಿಸುವ ಅಳತೆಗೋಲಾಗಿರುವುದಿಲ್ಲ. ಸ್ಥಳೀಯ ಸಮಸ್ಯೆಗಳು ಹಾಗೂ ಸರ್ಕಾರದ ಪ್ರಭಾವವನ್ನು ಆಧರಿಸಿ ಚುನಾವಣಾ ಫಲಿತಾಂಶಗಳು ಹೊರಹೊಮ್ಮುತ್ತವೆ.

ರಾಜ್ಯದಲ್ಲಿ ನಡೆದ ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ಪರಾಭವಗೊಂಡ ಕಾರಣದಿಂದ ನಾವ್ಯಾರೂ ಎದೆಗುಂದಬೇಕಿಲ್ಲ. ನಿರೀಕ್ಷೆಯಂತೆ ಆಡಳಿತ ಪಕ್ಷ ಕಾಂಗ್ರೆಸ್ ಅಧಿಕಾರ ದುರುಪಯೋಗ, ಆಮಿಷಗಳು ಮತದಾರರ ದಿಕ್ಕು ತಪ್ಪಿಸುವಲ್ಲಿ ಪರಿಣಾಮ ಬೀರಿವೆ ಎಂಬುದು ನಿಸ್ಸಂಶಯ ಎಂದಿದ್ದಾರೆ.

ಉಪಚುನಾವಣೆ ಸೋಲನ್ನು ನಾವು ಸಕಾರಾತ್ಮಕವಾಗಿ ಸ್ವೀಕರಿಸೋಣ, ಈ ಫಲಿತಾಂಶ ಭವಿಷ್ಯತ್ತಿನಲ್ಲಿ ನಮ್ಮ ಮುಂದಿರುವ ಸವಾಲುಗಳನ್ನು ಎಚ್ಚರಿಸುವ ಸಂಕೇತವೇ ಆಗಿದೆ ಎಂದು ಕಾರ್ಯಕರ್ತರಿಗೆ ತಿಳಿಸಿದ್ದಾರೆ.

# ಪ್ಯಾನ್ ಕಾರ್ಡ್‌ಗಳಿಗೆ ಕ್ಯೂ.ಆರ್. ಕೋಡ್

**(1ನೇ ಪುಟದಿಂದ)** ಮಾಡುವುದಿಲ್ಲ.

ಪ್ಯಾನ್ ಮಾಹಿತಿ ಬಳಸುವ ಎಲ್ಲಾ ಸಂಸ್ಥೆಗಳು ವೈಯಕ್ತಿಕ ಮಾಹಿತಿ ರಕ್ಷಣೆ, ಪ್ಯಾನ್ ಡಾಟಾ ರಕ್ಷಣೆ ವ್ಯವಸ್ಥೆ ಹೊಂದುವುದು ಕಡ್ಡಾಯವಾಗಲಿದೆ. ಪ್ಯಾನ್ 2.0 ಮೂಲಕ ಅಹವಾಲುಗಳ ಇತ್ಯರ್ಥ ವ್ಯವಸ್ಥೆ ಬಲಪಡಿಸಲಾಗುವುದು. ದೇಶದಲ್ಲಿ ಪ್ರಸಕ್ತ 78 ಕೋಟಿ ಪ್ಯಾನ್ ವಿತರಿಸಲಾಗಿದೆ. ಇವುಗಳಲ್ಲಿ ಶೇ.98ರಷ್ಟು ವೈಯಕ್ತಿಕ ಬಳಕೆದಾರರಾಗಿದ್ದಾರೆ.

# ವಿಮಾನದ ಶೌಚಾಲಯದಲ್ಲೇ ಮಲಗಿದ ಪಾನಮತ್ತ

## ಅಶಿಸ್ತಿನ ಪ್ರಯಾಣಿಕರಿಂದ ಆದ ತೊಂದರೆ ತಿಳಿಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ

ನವದೆಹಲಿ, ನ. 26 – ಪಾನಮತ್ತ ವಿಮಾನ ಪ್ರಯಾಣಿಕರಿಂದ ತಮಗೆ ಆದ ತೊಂದರೆಯನ್ನು ತಿಳಿಸಿರುವ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಕೆ.ವಿ. ವಿಶ್ವನಾಥನ್, ಅಶಿಸ್ತಿನ ಪ್ರಯಾಣಿಕರ ಮೇಲೆ ಕಡಿವಾಣ ಹಾಕಲು ವಿಮಾನಯಾನ ಸಂಸ್ಥೆಗಳು ಕ್ರಮ ತೆಗೆದುಕೊಳ್ಳಬೇಕಿದೆ ಎಂದಿದ್ದಾರೆ.

ನಾನು ಹಾಗೂ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ಇಬ್ಬರು ಪಾನಮತ್ತ ಪ್ರಯಾಣಿಕರಿಂದ ತೊಂದರೆ ಎದುರಿಸಿದ್ದೆವು. ಒಬ್ಬ ಪಾನಮತ್ತ ವಿಮಾನದ ಶೌಚಾಲಯದ ಒಳಗೆ ತೆರಳಿ ಅಲ್ಲೇ ಮಲಗಿದ್ದ. ಇನ್ನೋರ್ವ ಹೊರಗಡೆ ವಾಂತಿ ಮಾಡಿಕೊಳ್ಳುತ್ತಿದ್ದ ಎಂದು ನ್ಯಾಯಮೂರ್ತಿ ವಿಶ್ವನಾಥನ್ ಹೇಳಿದ್ದಾರೆ.

ವಿಮಾನದಲ್ಲಿದ್ದ ಸಿಬ್ಬಂದಿ ಎಲ್ಲರೂ ಮಹಿಳೆಯರೇ ಆಗಿದ್ದರು. 30-35 ನಿಮಿಷಗಳ ಕಾಲ ಯಾರಿಗೂ ಶೌಚಾಲಯದ ಬಾಗಿಲು ತೆರೆಯಲು ಸಾಧ್ಯವಾಗಲಿಲ್ಲ. ಬಾಗಿಲು ತೆರೆಯಲು ಸಹ ಪ್ರಯಾಣಿಕರ ನೆರವು ಪಡೆದರು ಎಂದು ನ್ಯಾಯಮೂರ್ತಿ ತಿಳಿಸಿದರು.

ಅಶಿಸ್ತಿನ ಪ್ರಯಾಣಿಕರ ಸಮಸ್ಯೆ ಎದುರಿಸಲು ವಿನೂತನ ಪರಿಹಾರಗಳ ಅಗತ್ಯವಿದೆ ಎಂದು ನ್ಯಾಯಾಲಯದಲ್ಲಿದ್ದ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರಿಗೆ ನ್ಯಾಯಮೂರ್ತಿ ವಿಶ್ವನಾಥನ್ ಹೇಳಿದರು.

2022ರ ನವೆಂಬರ್‌ನಲ್ಲಿ ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದ 73 ವರ್ಷದ ಮಹಿಳೆಯ ಮೇಲೆ ಪುರುಷ ಪ್ರಯಾಣಿಕನೋರ್ವ ಮೂತ್ರ ವಿಸರ್ಜನೆ ಮಾಡಿದ್ದಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ನಡೆಸುವಾಗ ನ್ಯಾಯಮೂರ್ತಿ ತಮ್ಮ ಅನುಭವ ತಿಳಿಸಿದ್ದಾರೆ.

# ಅಂಗವೈಕಲ್ಯ ಬದಿಗೊತ್ತಿ ಕ್ರೀಡೆಯಲ್ಲಿ ಪಾಲ್ಗೊಂಡ ವಿಕಲಚೇತನರು

ದಾವಣಗೆರೆ, ನ.26- ವಿಶ್ವ ವಿಕಲ ಚೇತನರ ದಿನಾ ಚರಣೆ ಅಂಗವಾಗಿ ನಗರದ ಮೋತಿ ವೀರಪ್ಪ ಕಾಲೇಜು ಆವರಣದಲ್ಲಿ ಮಂಗಳವಾರ ವಿಕಲಚೇತನರಿಗಾಗಿ ಏರ್ಪ ಡಿಸಿದ್ದ ಕ್ರೀಡಾಕೂಟ ಜನಮನ ಸೆಳೆಯಿತು.

ನಡೆಯಲು ಸಾಧ್ಯವಾಗದ, ಕಣ್ಣು ಕಾಣಿಸದ, ಕಿವಿ ಕೇಳಿಸದ, ಮಾತು ಬಾರದ, ಅಂಗಾಂಗ ಊನವಾಗಿರುವ 200ಕ್ಕೂ ಹೆಚ್ಚು ಮಂದಿ ವಿಕಲಚೇತನರು ಕ್ರೀಡಾಕೂಟದಲ್ಲಿ ಭಾಗವಹಿಸಿ, ಉತ್ಸಾಹದಿಂದ ನಾನಾ ಆಟೋಟ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು.

ವಾಕ್ ಮತ್ತು ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ 100 ಮೀಟರ್ ಮತ್ತು 200 ಮೀಟರ್ ಓಟ, ಜಾವಲಿನ್ ಥ್ರೋ, ಕೇರಂ, ಚೆಸ್, ಶಾರ್ಟ್‌ಪುಟ್ ಸ್ಪರ್ಧೆಗಳನ್ನು ನಡೆಸಲಾಯಿತು.

ದೈಹಿಕ ವಿಕಲಚೇತನರಿಗೆ ನಿಧಾನಗತಿ ಬೈಕ್ ರೇಸ್, ಶಾಟ್ ಪುಟ್, ಜಾವಲಿನ್ ಥ್ರೋ, ಮ್ಯೂಸಿಕಲ್ ಚೇರ್ . ಸಂಪೂರ್ಣ ದೃಷ್ಟಿದೋಷವುಳ್ಳವರಿಗೆ 50 ಮೀಟರ್ ರನ್ನಿಂಗ್ ರೇಸ್, ಶಾಟ್‌ಪುಟ್, ಮ್ಯೂಸಿಕಲ್ ಚೇರ್, ಚೆಸ್ ಹಾಗೂ ಭಾಗಶಃ ಅಂಧರಿಗೆ ಕೇರಂ ಸ್ಪರ್ಧೆಗಳು. ಬೆನ್ನುಹುರಿ ಅಪಘಾತ ಹೊಂದಿದವರಿಗೆ ಚೆಸ್, ಕೇರಂ, ವ್ಹೀಲ್ ಚೇರ್ ರೇಸ್ ಸ್ಪರ್ಧೆಗಳು ನಡೆದವು.

ಅಪರ ಜಿಲ್ಲಾಧಿಕಾರಿ ಬಿ.ಎನ್. ಲೋಕೇಶ್ ಗುಂಡು ಎಸೆಯುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ವಿಕಲಚೇತನ ರಲ್ಲಿರುವ ಪ್ರತಿಭೆ, ಕೌಶಲ್ಯಗಳನ್ನು ಪ್ರೋತ್ಸಾಹಿಸಲು ಕ್ರೀಡಾ ಕೂಟ ಆಯೋಜಿಸುತ್ತಿರುವುದು ಶ್ಲಾಘನೀಯ ಎಂದರು. ಸ್ಪರ್ಧಾಳುಗಳಿಗೆ ಸೋಲು-ಗೆಲುವು ಸಹಜ. ಸಕಾರಾತ್ಮಕ ಧೋರಣೆಯಿಂದ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು. ಸೋತರೆ ನೊಂದುಕೊಳ್ಳದೆ, ಕ್ರೀಡಾ ಸ್ಫೂರ್ತಿಯಿಂದ ಗೆದ್ದವರನ್ನು ಅಭಿನಂದಿಸಬೇಕು ಎಂದು ಸಲಹೆ ನೀಡಿದರು.



**ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ನಡೆದ ಕ್ರೀಡಾಕೂಟ**

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮೋತಿ ವೀರಪ್ಪ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಪಂಚಾಕ್ಷರಪ್ಪ ಮಾತನಾಡಿ, ಅಂಗವೈಕಲ್ಯವನ್ನು ಶಾಪ ಎಂದು ತಿಳಿದುಕೊಳ್ಳದೆ ಛಲದಿಂದ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು. ಅನೇಕ ವಿಕಲಚೇತನರು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಖ್ಯಾತರಾಗಿದ್ದಾರೆ. ಅವರಂತೆಯೇ ನೀವೂ ಸಹ ಕೀಳರಿಮೆ ತೊರೆದು ಕ್ರೀಡೆಯಲ್ಲಿ ಪಾಲ್ಗೊಳ್ಳಿ ಎಂದು ಕಿವಿ ಮಾತು ಹೇಳಿದರು.

ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿ ಡಾ.ಕೆ.ಕೆ. ಪ್ರಕಾಶ್, ದಾವಣಗೆರೆ ದಕ್ಷಿಣ ವಲಯದ ದೈಹಿಕ ಶಿಕ್ಷಣಾಧಿಕಾರಿ ವಿಜಯಕುಮಾರ್, ಉತ್ತರ ವಲಯದ ದೈಹಿಕ ಶಿಕ್ಷಣಾಧಿಕಾರಿ ಮೊಹಮ್ಮದ್ ಹುಸೇನ್, ಪರಶುರಾಮ ಗೌಡ ಉಪಸ್ಥಿತರಿದ್ದರು. ಸುಬ್ರಹ್ಮಣ್ಯ ಸ್ವಾಗತಿಸಿದರು.

# ದೀರ್ಘಾವಧಿ ಸಂಬಂಧ ಅಪರಾಧ ಮಾಡಿದರೆ ಗಂಭೀರ ಪರಿಣಾಮ

**ಸುಪ್ರೀಂ ಕೋರ್ಟ್**

ನವದೆಹಲಿ, ನ. 25 – ದೀರ್ಘಾವಧಿಯ ಸಂಬಂಧ ಹಳಸಿದಾಗ ಕಾನೂನು ಬಳಸಿಕೊಂಡು, ಸಂಬಂಧವನ್ನು ಅಪರಾಧಗೊಳಿಸುವುದು ಕಂಡು ಬರುತ್ತಿದೆ ಎಂದು ಸುಪ್ರೀಂ ಕೋರ್ಟ್ ತಿಳಿದೆ.

ವ್ಯಕ್ತಿಯೊಬ್ಬರ ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಹಾಗೂ ವಂಚನೆ ಎಫ್.ಐ.ಆರ್. ರದ್ದುಗೊಳಿಸುವ ತೀರ್ಪು ನೀಡುವಾಗ ಸುಪ್ರೀಂ ಕೋರ್ಟ್ ಈ ಟಿಪ್ಪಣಿ ಮಾಡಿದೆ.

ಈ ಪ್ರಕರಣದಲ್ಲಿ ವ್ಯಕ್ತಿ ಒಂಭತ್ತು ವರ್ಷಗಳ ಸುದೀರ್ಘ ಕಾಲ ಸಂಬಂಧ ಹೊಂದಿದ್ದಾರೆ. ಇಷ್ಟು ತಡವಾಗಿ ಪ್ರಕರಣ ದಾಖಲಿಸುವುದರಿಂದ ಗಂಭೀರ ಪರಿಣಾಮಗಳಾಗುತ್ತವೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಇದೇ ರೀತಿಯ ಸಾಕಷ್ಟು ಪ್ರಕರಣಗಳು ನ್ಯಾಯಾಲಯದ ಎದುರು ಬಂದಿವೆ. ಸುದೀರ್ಘ ಕಾಲದ ಸಹಮತಿಯ ಸಂಬಂಧಗಳು ಹಳಸಿದಾಗ, ಅಪರಾಧಿಕ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದು ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಎ. ಕೋಟೇಶ್ವರ್ ಸಿಂಗ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

ಮದುವೆಯ ಸುಳ್ಳು ಭರವಸೆ ನೀಡಿ ವ್ಯಕ್ತಿ ತನ್ನ ಶೋಷಣೆ ಮಾಡಿರುವುದಾಗಿ ಮಹಿಳೆ ಎಫ್.ಐ.ಆರ್. ದಾಖಲಿಸಿದ್ದರು. ಇದರ ವಿರುದ್ಧ ಮುಂಬೈ ಹೈಕೋರ್ಟ್‌ನಲ್ಲಿ ವ್ಯಕ್ತಿ ದಾಖಲಿಸಿದ್ದ ಮನವಿಯನ್ನು ತಳ್ಳಿ ಹಾಕಲಾಗಿತ್ತು. ನಂತರ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಮದುವೆಯ ಬೇಡಿಕೆ ಇಲ್ಲದೇ ಸುದೀರ್ಘ ಕಾಲ ದೈಹಿಕ ಸಂಬಂಧವಿದೆ. ಈ ಸಂಬಂಧದಲ್ಲಿ ಮದುವೆಯ ಯಾವುದೇ ಭರವಸೆ ಇರಲಿಲ್ಲ ಹಾಗೂ ಈ ಸಂಬಂಧ ಸಹಮತದ್ದಾಗಿದ್ದು ಎಂಬುದು ಕಂಡು ಬರುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

# ದೇಶದ ಏಕತೆಗೆ ಸಂವಿಧಾನವೇ ಮೂಲ ಆಧಾರ

## ಜಗಳೂರು: ಸಂವಿಧಾನ ದಿನಾಚರಣೆಯಲ್ಲಿ ನ್ಯಾ.ಆರ್.ಚೇತನ್ ಅಭಿಮತ

ಜಗಳೂರು, ನ.26- ದೇಶದ ಏಕತೆಗೆ ಸಂವಿಧಾನವೇ ಮೂಲ ಆಧಾರವಾಗಿದ್ದು ಮೂಲಭೂತ ಹಕ್ಕು ಮತ್ತು ಕರ್ತವ್ಯಗಳನ್ನು ಪ್ರತಿ ಯೊಬ್ಬರೂ ಗೌರವಿಸಬೇಕು ಎಂದು ಎಂದು ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ಆರ್.ಚೇತನ್ ಅಭಿಪ್ರಾಯ ವ್ಯಕ್ತಪಡಿಸಿದರು.



ಪಟ್ಟಣದ ಕೋರ್ಟ್ ಸಭಾಂ ಗಣದಲ್ಲಿ ತಾಲೂಕು ವಕೀಲರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಸಂವಿಧಾನ ದಿನಾಚರಣೆ ಕಾರ್ಯ ಕ್ರಮದಲ್ಲಿ ಅವರು ಮಾತನಾಡಿದರು.

ಸಂವಿಧಾನದ ಅವಕಾಶಗಳು ಜಾತ್ಯಾತೀತ, ಧರ್ಮಾತೀತವಾಗಿವೆ. ಸಂವಿಧಾನದ ಆಶಯ ಮತ್ತು ಹಕ್ಕುಗಳಿಗೆ ದಕ್ಕೆ ಉಂಟಾದರೆ ಹೈಕೋರ್ಟ್, ಸುಪ್ರೀಂಕೋರ್ಟ್ ಮೆಟ್ಟಿಲೇರಲು ಮುಕ್ತ ಅವಕಾಶವಿದೆ ಎಂದು ಹೇಳಿದರು.

ವಕೀಲರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಟಿ.ಬಸವರಾಜ್ ಮರೇನಹಳ್ಳಿ ಮಾತನಾಡಿ, ಪ್ರತಿ ಯೊಬ್ಬರೂ ಸಂವಿಧಾನದ ಮಹತ್ವ ಅರಿಯಬೇಕು. ಸಂವಿಧಾನದ ರಕ್ಷಣೆಗೆ ವಕೀಲರು ಪ್ರತಿಬಿಂಬವಾ ಗಿದ್ದಾರೆ. ಧರ್ಮಗ್ರಂಥಗಳ ಮೇಲಿನ ವ್ಯಾಮೋಹ, ಪ್ರಜ್ಞೆಯು ಶ್ರೇಷ್ಠ ಗ್ರಂಥ ಸಂವಿಧಾನದ ಮೇಲೆ ಮೈಗೂಡಿಸಿ ಕೊಳ್ಳಬೇಕು ಎಂದು ತಿಳಿಸಿದರು.

ವಕೀಲ ಕರಿಬಸಯ್ಯ ಮಾತ ನಾಡಿ, ಅಂಬೇಡ್ಕರ್ ಮತ್ತು ಬಸವಣ್ಣನವರನ್ನು ಜಾತ್ಯತೀತ ನಿಲುವಿನಲ್ಲಿ ಮನಗಂಡು, ಅವರು ರಚಿಸಿದ ಸಂವಿಧಾನ ಮತ್ತು ವಚನಗಳನ್ನು ಅಭ್ಯಾಸಿಸಿದರೆ ನಿಜಕ್ಕೂ ಆಶಯಗಳು ಅರ್ಥವಾಗುತ್ತವೆ. ಭ್ರಾತೃತ್ವ ಎಲ್ಲಾವರ್ಗದವರಿಗೂ ಅನ್ವಯವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸರ್ಕಾರಿ ಸಹಾಯಕ ಅಭಿಯೋಜಕ ಮಂ ಜುನಾಥ್, ವಕೀಲರಾದ ರುದ್ರೇಶ್, ಕುಂಬಾರ, ಹನುಮಂತಪ್ಪ, ಕರಿಬಸಯ್ಯ, ತಿಪ್ಪೇಸ್ವಾಮಿ, ಬಸವ ರಾಜಪ್ಪ, ನಾಗೇಶ್, ಪಾಟೀಲ್, ವಕೀಲರ ಸಂಘದ ಪದಾಧಿಕಾರಿಗಳು ಇದ್ದರು.

# ಸಮಾಜದಲ್ಲಿ ತಾರತಮ್ಯ, ಅಸಮಾನತೆ ತೊಲಗಲಿ

## 'ಸಂವಿಧಾನ ದಿನಾಚರಣೆ, ಕರ್ನಾಟಕ ರಾಜ್ಯೋತ್ಸವದಲ್ಲಿ ನ್ಯಾ. ಹೆಚ್. ಬಿಲ್ಲಪ್ಪ

ದಾವಣಗೆರೆ, ನ.26- ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 75 ವರ್ಷಗಳೇ ಕಳೆದರೂ ಸಮಾಜದಲ್ಲಿ ಇನ್ನೂ ಅಸಮಾನತೆ ಎದ್ದು ಕಾಣುತ್ತಿದೆ ಎಂದು ಹೈಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ಎಚ್. ಬಿಲ್ಲಪ್ಪ ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ವಕೀಲರ ಸಂಘದ ವತಿಯಿಂದ ಇಲ್ಲಿನ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ 'ಸಂವಿಧಾನ ದಿನಾಚರಣೆ' ಮತ್ತು 'ಕರ್ನಾಟಕ ರಾಜ್ಯೋತ್ಸವ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿ ಕೆಲವರು ಸಾಮಾಜಿಕ ನ್ಯಾಯ, ಶಿಕ್ಷಣ, ಸರ್ಕಾರಿ ಸೌಲಭ್ಯ ಹಾಗೂ ಅವಕಾಶಗಳಿಂದ ವಂಚಿತರಾಗಿದ್ದು, ಇವರ ಕೊರಗು ಸಮಾಜದ ಒಂದೆಡೆ ಕೇಳಿಸಿದರೆ, ಮತ್ತೊಂದೆಡೆ ಧರ್ಮ, ಜಾತಿ, ಲಿಂಗ ಹಾಗೂ ಬಣ್ಣದ ಆಧಾರದ ಮೇಲೆ ಅನೇಕ ತಾರತಮ್ಯಗಳು ಇಂದಿಗೂ ನಡೆಯುತ್ತಿದ್ದು, ಇದನ್ನು ಸರಿಪಡಿಸಲು ಸಂವಿಧಾನದ ವಿದ್ಯಾರ್ಥಿ ಗಳು ಪ್ರಯತ್ನ ಪಡಬೇಕು ಎಂದು ಹೇಳಿದರು.

ಪ್ರತಿಯೊಬ್ಬರ ಆಚಾರ-ವಿಚಾರಗಳು ವೈಯಕ್ತಿ ಕವಾಗಿ ಇರಬೇಕೇ ವಿನಹ: ಅವುಗಳನ್ನು ಸಾರ್ವಜ ನಿಕವಾಗಿ ಮಾಡಬಾರದು. ಈ ನಿಟ್ಟಿನಲ್ಲಿ ಸಮಾಜ ದಲ್ಲಿ ಎಲ್ಲರೂ ಸಾರ್ವಜನಿಕವಾಗಿ ಬದುಕುವ ಜತೆಗೆ ಸಂವಿಧಾನವನ್ನು ಪಾಲಿಸಬೇಕು ಎಂದು ತಿಳಿಸಿದರು. ಸಮಾಜದಲ್ಲಿ ಶಾಂತಿ ದೂರಾಗಿದ್ದರಿಂದ ಎಲ್ಲೆಡೆಯೂ ವಿವಾದವೇ ಕಾಣುತ್ತಿದೆ. ಹಾಗಾಗಿ ಸಂವಿಧಾನ ಹಾಗೂ ಕಾನೂನುನನ್ನು ಗೌರವಿಸಿ ನಡೆದರೆ ಸಮಾಜದಲ್ಲಿ ಅಶಾಂತಿ ಹೋಗಲಾಡಿಸಬಹುದು. ಸಂವಿಧಾನವು ದೇಶದ ಪ್ರಜೆಗಳಿಗೆ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆ ಮತ್ತು ಸಮಾನ ಅವಕಾಶವನ್ನು ನೀಡಿದೆ ಎಂದರು.



**ಡಿ.14ಕ್ಕೆ ರಾಷ್ಟ್ರೀಯ ಲೋಕ ಅದಾಲತ್..!**

**ಡಿಸೆಂಬರ್ 14ರಂದು ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದ್ದು, ಅಂದು ಎಲ್ಲಾ ವಕೀಲರು ಹೆಚ್ಚು ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಮೂಲಕ ತಮ್ಮ ಕಕ್ಷಿದಾರರಿಗೆ ನ್ಯಾಯ ಕೊಡಿಸಿ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.**

ಗ್ರಾಮೀಣ ಮೂಲದಿಂದ ಕನ್ನಡ ಭಾಷೆ ಉಳಿಯುತ್ತಿದೆ. ಕನ್ನಡಿಗರು ಪರರಿಗೂ ನಮ್ಮ ಭಾಷೆ ಕಲಿಸಲು ಮುಂದಾಗಬೇಕು. ಆದರೆ ಅವರನ್ನು ಅಲ್ಲಗಳೆಯಬಾರದು ಎಂದು ಹೇಳಿದರು. ಕಲೆ, ಸಾಹಿತ್ಯ, ಭಾಷೆ ಹಾಗೂ ಪ್ರಾಕೃತಿಕವಾಗಿ ಕನ್ನಡ ನಾಡು ಶ್ರೀಮಂತವಾಗಿದೆ. ಶ್ರೇಷ್ಠ ಜೀವನ ಕಟ್ಟಿಕೊಳ್ಳಲು ಈ ನಾಡು ಸಹಾಯಕವಾಗಿದೆ ಎಂದು ಬಣ್ಣಿಸಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್. ಹೆಗಡೆ ಮಾತನಾಡಿದರು. ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಸಂವಿಧಾನ ಪೀಠಿಕೆ ಬೋಧಿಸಿದರು.

ಈ ವೇಳೆ ನ್ಯಾಯಾಧೀಶರಾದ ಮಂಜಪ್ಪ ಹನುಮಂತಪ್ಪ ಅಣ್ಣಯ್ಯನವರ, ಆರ್.ಎನ್. ಪ್ರವೀಣ್ ಕುಮಾರ್, ಶ್ರೀರಾಮ ನಾರಾಯಣ ಹೆಗಡೆ, ಶಿವಪ್ಪ ಗಂಗಪ್ಪ ಸಲಗೆರೆ, ನಾಗೇಶ್, ಗಾಯತ್ರಿ, ಪ್ರಶಾಂತ್, ಮಲ್ಲಿಕಾರ್ಜುನ್, ಸಿದ್ದರಾಜು ಮತ್ತಿತರರಿದ್ದರು.

# ಒನ್ ಸಬ್‌ಸ್ಕ್ರಿಪ್ಷನ್ ಮೂಲಕ 30 ಅಂತರ ರಾಷ್ಟ್ರೀಯ ಪ್ರಕಾಶಕರ ನಿಯತಕಾಲಿಕಗಳು ಲಭ್ಯ

ನವದೆಹಲಿ, ನ. 26 – ಕೇಂದ್ರ ಸರ್ಕಾರ ರೂಪಿಸಿರುವ ಒನ್ ನೇಷನ್ – ಒನ್ ಸಬ್‌ಸ್ಕ್ರಿಪ್ಷನ್ ಮೂಲಕ 30 ಪ್ರಮುಖ ಅಂತರರಾಷ್ಟ್ರೀಯ ಪ್ರಕಾಶಕರ 13 ಸಾವಿರದಷ್ಟು ಇ-ನಿಯತಕಾಲಿಕಗಳು ಶಿಕ್ಷಣ ಸಂಸ್ಥೆಗಳು ಹಾಗೂ ವಿದ್ಯಾರ್ಥಿಗಳಿಗೆ ಲಭ್ಯವಾಗಲಿವೆ.

ನಿನ್ನೆ ಕೇಂದ್ರ ಸಂಪುಟ ಒನ್ ನೇಷನ್ ಒನ್ ಸಬ್‌ಸ್ಕ್ರಿಪ್ಷನ್ ಯೋಜನೆಗೆ ಅನುಮತಿ ನೀಡಿದೆ. ಈ ಮೂಲಕ ಸಂಶೋಧನಾ ಪ್ರಬಂಧಗಳು ಹಾಗೂ ನಿಯತ ಕಾಲಿಕ ಪ್ರಕಾಶನಗಳು ಸರಳವಾಗಿ, ಬಳಕೆದಾರರ ಸ್ನೇಹಿ ಯಾಗಿ ಹಾಗೂ ಡಿಜಿಟಲ್ ಪ್ರಕ್ರಿಯೆ ಮೂಲಕ ದೊರೆಯಲಿವೆ.

ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳು, ಕೇಂದ್ರ ಸರ್ಕಾರದ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರಗಳು ಈ ಯೋಜನೆಯ ವ್ಯಾಪ್ತಿಗೆ ಬರಲಿವೆ. ಕೇಂದ್ರ ಉನ್ನತ ಶಿಕ್ಷಣ ಇಲಾಖೆಯ ಏಕೀಕೃತ ಪೋರ್ಟಲ್ ಮೂಲಕ ಈ ಸೌಲಭ್ಯ ಸಿಗಲಿದೆ.

ಅನುಸಂಧಾನ ನ್ಯಾಷನಲ್ ರೀಸರ್ಚ್ ಫೌಂಡೇಷನ್ (ಎ.ಎನ್.ಆರ್.ಎಫ್.) ಕಾಲಕಾಲಕ್ಕೆ ಈ ಯೋಜನೆ ಬಳಕೆಯನ್ನು ಪರಿಶೀಲಿಸಲಿದೆ.

ಮೂರು ವರ್ಷಗಳ ಅವಧಿಗಾಗಿ ಈ ಯೋಜನೆಗೆ 6 ಸಾವಿರ ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯು. ಜಿ.ಸಿ.) ಸ್ವಾಯತ್ತ ಸಂಸ್ಥೆಯಾಗಿರುವ ಮಾಹಿತಿ ಮತ್ತು ಗ್ರಂಥಾಲಯ ಜಾಲ (ಐ.ಎನ್.ಎಫ್.ಎಲ್.ಐ.ಬಿ. ಎನ್.ಇ.ಟಿ.) ಈ ಯೋಜನೆಯಲ್ಲಿ ಭಾಗಿಯಾಗಲಿದೆ.

6,300 ಸಂಸ್ಥೆಗಳು ಹಾಗೂ 1.8 ಕೋಟಿ ವಿದ್ಯಾರ್ಥಿಗಳಿಗೆ ಈ ಯೋಜನೆ ನೆರವು ಸಿಗಲಿದೆ.

# ಬಿಳಿಚೋಡು : ಇಂದು ಆರೋಗ್ಯ ತಪಾಸಣಾ ಶಿಬಿರ

ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಪ್ರೀತಿ ಆರೈಕೆ ಟ್ರಸ್ಟ್ ವತಿಯಿಂದ ಡಾ. ರವಿಕುಮಾರ್ ಟಿ.ಜಿ. ನೇತೃತ್ವದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆರೈಕೆ ಕ್ಲಿನಿಕ್ ಮತ್ತು ಗುತ್ತಿ ಮೆಡಿಕಲ್ಸ್‌ನಲ್ಲಿ ಇಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ಏರ್ಪಡಿಸಲಾಗಿದೆ.

ವಿವರಕ್ಕೆ ಕ್ಯಾಂಪ್ ಮ್ಯಾನೇಜರ್ ವಿನೋದ್ (9731793463, 84315 41487, 9164465550) ಅವರನ್ನು ಸಂಪರ್ಕಿಸಬಹುದು.

# ಕನಕ - ಪುರಂದರರು ದಾಸ ಸಾಹಿತ್ಯದ ಅಶ್ವಿನಿ ದೇವತೆಗಳು



**ಹಲವಾಗಲು ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಶಾಸಕರಾದ ಎಂ.ಪಿ ಲತಾ ಅಭಿಮತ**

ಹರಪನಹಳ್ಳಿ, ನ.26- ಕನಕದಾಸರು ದಾಸ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ಅವರು ತಾಲ್ಲೂಕಿನ ಹಲುವಾಗಲು ಗ್ರಾಮದಲ್ಲಿ ಭಾನುವಾರ ಸಂಜೆ ಆಯೋಜಿಸಿದ್ದ ಕನಕದಾಸರ 537ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಸಾಹಿತ್ಯದ ಮೂಲಕ ಜನ ಜಾಗೃತಿ ಮೂಡಿಸಿ ದವರಲ್ಲಿ ಕನಕದಾಸರು ಮತ್ತು ಪುರಂದರದಾಸರು ಪ್ರಮು ಖರು. ಇವರನ್ನು ದಾಸ ಸಾಹಿತ್ಯದ ಅಶ್ವಿನಿ ದೇವತೆಗಳು ಎಂದು ಕರೆಯಲಾಗುತ್ತದೆ ಎಂದು ಹೇಳಿದರು.

ವಿಜಯನಗರ ಸಾಮ್ರಾಜ್ಯದ ಸೇನಾಧಿಪತಿಯಾಗಿದ್ದ ತಂದೆ ಬೀರಪ್ಪ ನಾಯಕನ ಮರಣದ ನಂತರ ಕನಕದಾಸರು ಸೇನಾಧಿಪತಿಯಾಗಿ ಉತ್ತಮ ಆಡಳಿತ ನಡೆಸಿ ಬಳಿಕ ಭಕ್ತಿ ಪಂಥದ ಕಡೆಗೆ ವಾಲಿದರು, ಶ್ರೀಕೃಷ್ಣನ ಭಕ್ತರಾಗಿದ್ದ ಕನಕರು ಕೃಷ್ಣನನ್ನು ನೆನೆದು ಉಡುಪಿಯ ಮಠಕ್ಕೆ ತೆರಳುತ್ತಾರೆ. ಅಲ್ಲಿ ಶ್ರೀಕೃಷ್ಣ ಗೋಡೆಯಿಂದಲೇ ದರ್ಶನ ನೀಡುತ್ತಾನೆ ಎಂದು ಹೇಳಿದರು.

ವಾಲ್ಮೀಕಿ ಸಮಾಜದ ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷೆ ಎಚ್.ಟಿ.ವನಜಾಕ್ಷಿ ಮಾತನಾಡಿ, ಕನಕದಾಸರು ಜಾತಿ ವ್ಯವಸ್ಥೆಯನ್ನು ವಿರೋಧಿಸಿದ್ದರು, ಸಮ ಸಮಾಜ ನಿರ್ಮಾಣದ ಕನಸು ಕಂಡಿದ್ದರು. ಅವರ ಆದರ್ಶಗಳನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದು ಹೇಳಿದರು.

ಯುವ ಮುಖಂಡ ದಾದಾಪುರ ಸುನೀಲ್ ಮಾತನಾಡಿ, ಪ್ರತಿ ವರ್ಷ ಕನಕದಾಸರ ಜಯಂತಿಯನ್ನು ನಮ್ಮ ಗ್ರಾಮದಲ್ಲಿ ಸರ್ವ ಜನಾಂಗದವರು ಸೇರಿ ಪ್ರೀತಿ, ವಿಶ್ವಾಸದಿಂದ ಆಚರಿಸುತ್ತಾ ಬಂದಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಸರಿತಾ, ಹರಪನಹಳ್ಳಿ ಪುರಸಭೆ ಸದಸ್ಯ ಉದ್ದಾರ ಗಣೇಶ, ಮುಖಂಡರಾದ ಗಿರೀಶಪ್ಪ, ದನಕವರ್ ಸೋಮಲಿಂಗಪ್ಪ, ಶಿವಪ್ಪ, ಭೋವಿ ವೆಂಕಟೇಶ, ಸಂಗವ್ವನವರ ನಿಂಗಜ್ಜ, ಮತ್ತೂರು ಬಸವರಾಜ, ಪ್ರಭು, ಮಂಜುನಾಥ, ದಾದಾಪುರ ಶಿವಪುತ್ರ, ಎಚ್.ಟಿ.ಹನುಮಂತ, ಕಲ್ಲೇರ ನಾಗರಾಜ, ಕರಿಯಪ್ಪ, ರಮೇಶ್, ವೀರಭದ್ರಪ್ಪ, ಪಾರ್ವತಮ್ಮ, ಸೈಯದ್ ಇರ್ಫಾನ್ ಸೇರಿದಂತೆ ಇತರರು ಇದ್ದರು.

# ಕೆನಡಾ, ಮೆಕ್ಸಿಕೋ, ಚೀನಾ ಸರಕುಗಳ ಮೇಲೆ ಸುಂಕ : ಟ್ರಂಪ್

ವಾಷಿಂಗ್ಟನ್, ನ. 26 – ಕೆನಡಾ ಹಾಗೂ ಮೆಕ್ಸಿಕೋದಿಂದ ಆಮದಾ ಗುವ ಸರಕುಗಳ ಮೇಲೆ ಶೇ.25 ಹಾಗೂ ಚೀನಾದಿಂದ ಆಮದಾಗುವ ಸರಕಿನ ಮೇಲೆ ಶೇ.10ರಷ್ಟು ಸುಂಕ ವಿಧಿಸಲು ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ನಿರ್ಧರಿಸಿದ್ದಾರೆ.

ಜನವರಿ 20ರಂದು ಅಧಿಕಾರ ವಹಿಸಿಕೊಂಡ ನಂತರ, ಈ ಮೂರೂ ದೇಶಗಳಿಂದ ಆಮದಾಗುವ ಸರಕುಗಳ ಮೇಲೆ ಸುಂಕ ವಿಧಿಸುವುದಾಗಿ ಟ್ರಂಪ್ ಹೇಳಿದ್ದಾರೆ.

ಸಾವಿರಾರು ಜನರು ಮೆಕ್ಸಿಕೋ ಹಾಗೂ ಕೆನಡಾಗಳಿಂದ ಬರುತ್ತಿದ್ದಾರೆ. ಅವರು ಹಿಂದೆಂದೂ ಕಾಣದಷ್ಟು ಅಪರಾಧ ಹಾಗೂ ಮಾದಕಗಳಿಗೂ ಕಾರಣವಾಗುತ್ತಿದ್ದಾರೆ.


ಈಗಲೂ ಮೆಕ್ಸಿಕೋದಿಂದ ಸಾವಿರಾರು ಜನರು ತಂಡಗಳಲ್ಲಿ ಬರುತ್ತಿದ್ದಾರೆ. ನಮ್ಮ ಮುಕ್ತ ಗಡಿ ಕಾರಣದಿಂದ ಅವರನ್ನು ತಡೆಯಲು ಸಾಧ್ಯವಾಗುತ್ತಿಲ್ಲ ಎಂದು ಟ್ರಂಪ್ ಹೇಳಿದ್ದಾರೆ. ನಾನು ಜನವರಿ 20 ರಂದು ಅಧಿಕಾರ ವಹಿಸಿಕೊಂಡ ತಕ್ಷಣ ಮೆಕ್ಸಿಕೋ ಹಾಗೂ ಕೆನಡಾ ಗಳಿಂದ ಆಮದಾಗುವ ಸರಕುಗಳ ಮೇಲೆ ಶೇ.25ರಷ್ಟು ಸುಂಕ ವಿಧಿಸುತ್ತೇನೆ. ಮಾದಕ ಹಾಗೂ ಅಕ್ರಮ ವಲಸೆ ನಿಲ್ಲುವವರೆಗೂ ಈ ಸುಂಕ ಜಾರಿಯಲ್ಲಿ ಇರಲಿದೆ ಎಂದು ಟ್ರಂಪ್ ಹೇಳಿದ್ದಾರೆ.

# ಅನುಕಂಪದ ಹುದ್ದೆ : ಆನ್‌ಲೈನ್ ತಂತ್ರಾಂಶ

ದಾವಣಗೆರೆ ನ.26 - ಅನು ಕಂಪದ ನೇಮಕಾತಿ ಅರ್ಜಿಗಳನ್ನು ಆನ್‌ಲೈನ್ ತಂತ್ರಾಂಶದ ಮುಖಾಂ ತರ ಇಇಡಿಎಸ್‌ನಲ್ಲಿ ನಿರ್ವಹಿಸುವ ವ್ಯವಸ್ಥೆಯನ್ನು ಇಲಾಖಾ ವೆಬ್‌ಸೈಟ್ schooleducation.karnataka.gov.in ನಲ್ಲಿ ಅಳವಡಿಸ ಲಾಗಿದೆ.

ವಿವರಕ್ಕೆ ವೆಬ್‌ಸೈಟ್ ಅಥವಾ ಡಿಡಿಓ ಸಂಪರ್ಕಿಸಲು ಡಿಡಿಪಿಐ ಜಿ.ಕೊಟ್ರೇಶ್ ತಿಳಿಸಿದ್ದಾರೆ.

**ಬೇಕಾಗಿದ್ದಾರೆ**
ಫೀಲ್ಡ್ ಸೇಲ್ಸ್ ಎಕ್ಸಿಕ್ಯೂಟಿವ್ ಪುರುಷರಿಗೆ ಮಾತ್ರ ಒಂದು ವರ್ಷದ ಅನುಭವದೊಂದಿಗೆ ಫೀಲ್ಡ್ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಮತ್ತು ಸ್ಮಾರ್ಟ್ ಫೋನ್ ಹೊಂದಿರುವ ಅಭ್ಯರ್ಥಿಗಳು ಸಂಪರ್ಕಿಸಿ.
ಕೆಲಸದ ಸ್ಥಳ ದಾವಣಗೆರೆ
ವಯಸ್ಸಿನ ಮಿತಿ : 18 ರಿಂದ 32 ವರ್ಷ
ಸಂಬಳ 18 ರಿಂದ 23 ಸಾವಿರ
7892229835



# ರೀತಿ ನೀತಿಗಳು, ನಿಯಮಗಳ ಗೊಂಚಲೇ ಸಂವಿಧಾನ

ಒಂದು ರಾಷ್ಟ್ರ ನಿರ್ದಿಷ್ಟ ಪಥದತ್ತ ಮುನ್ನಡೆಯ ಬೇಕಾದರೆ ಕೆಲ ರೀತಿ, ನೀತಿಗಳು, ಕಟ್ಟು ಪಾಡುಗಳು, ನಿಯಮಗಳು, ಮಾನದಂಡಗಳು ಇನ್ನು ಮೊದಲಾದವುಗಳು ಅತಿ ಅಗತ್ಯ.

ಇಂತಹ ರೀತಿ, ನೀತಿಗಳು ಮತ್ತು ನಿಯಮಾವಳಿಗಳನ್ನು ಒಳಗೊಂಡ ಗೊಂಚಲಿಗೆ' ಸಂವಿಧಾನ' ಎಂದು ಕರೆಯಲಾಗುತ್ತದೆ. ಇದು ರಾಷ್ಟ್ರದ ಸಮಗ್ರ ರಾಜಕೀಯ ತಳಪಾಯವೂ ಹೌದು. ಈ ನಿಯಮಾವಳಿಗಳನ್ನು ರಚಿಸಲೆಂದೇ ಸಂವಿಧಾನ ಎಂಬ ಪರಿಕಲ್ಪನೆ ಮೂಡಿ ಬಂದಿತು. ಇದು ರಾಜ್ಯದ ಸ್ವರೂಪ, ಪೌರರ ಹಕ್ಕು ಮತ್ತು ಕರ್ತವ್ಯಗಳು ಹಾಗೂ ಸರ್ಕಾರ ಮತ್ತು ಜನತೆಯ ನಡುವೆ ಇರುವ ಸಂಬಂಧಗಳನ್ನು ತಿಳಿಸುವುದಲ್ಲದೆ ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ರಾಜ್ಯದ ಸಾರ್ವಭೌಮಾಧಿಕಾರವನ್ನು ಹಂಚಿಕೆ ಮಾಡುವಲ್ಲಿ ಪ್ರಭಾವ ಬೀರುವ ನಿಯಮಗಳನ್ನು ಒಳಗೊಂಡಿದೆ.

ಸ್ವತಂತ್ರ ಭಾರತಕ್ಕೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಕಾರ್ಯ ಭಾರಗಳನ್ನು ಸುಲಲಿತವಾಗಿ ನಿರ್ವಹಿಸಲು ಸಂವಿಧಾನದ ಅಗತ್ಯತೆ ಬಹುಮುಖ್ಯವಾಗಿತ್ತು. ಇದನ್ನು ಮನಗಂಡ ರಾಷ್ಟ್ರ ನಾಯಕರು ಸಂವಿಧಾನ ರಚನಾ ಸಭೆಯನ್ನು ರಚಿಸಿ ಅದರಲ್ಲಿ ದೇಶದ ವಿವಿಧ ಭಾಗಗಳಿಂದ ಆಯ್ಕೆಯಾದ 318 ಪ್ರತಿನಿಧಿಗಳನ್ನು ಸೇರ್ಪಡೆ ಮಾಡಿದರು. ಇದರ ಮೊದಲ ಸಭೆ 1946 ಡಿಸೆಂಬರ್ 9 ರಂದು ಸಮಾವೇಶಗೊಂಡಿತು. ಸಂವಿಧಾನ ರಚನಾ ಸಭೆಯ ಅಧ್ಯಕ್ಷತೆಯನ್ನು ಡಾ. ಬಾಬು ರಾಜೇಂದ್ರ ಪ್ರಸಾದ್ ಹಾಗೂ ಕರಡು ರಚನಾ ಸಮಿತಿಯ ಅಧ್ಯಕ್ಷತೆಯನ್ನು ಡಾ. ಬಿ. ಆರ್. ಅಂಬೇಡ್ಕರ್ ವಹಿಸಿಕೊಂಡರು. ಇವರ ಜೊತೆ ಇನ್ನೂ ಹಲವು ಪ್ರಮುಖ ನಾಯಕರು ಸಂವಿಧಾನ ರಚಿಸುವಲ್ಲಿ ತಮ್ಮ ತನು-ಮನವನ್ನು ಅರ್ಪಿಸಿದರು.

ಸಂವಿಧಾನ ರಚನೆಗೂ ಮುನ್ನ ಸದಸ್ಯರು ಅಮೆರಿಕಾ, ಬ್ರಿಟನ್, ಸ್ವಿಟ್ಜರ್ಲ್ಯಾಂಡ್, ಐರ್ಲ್ಯಾಂಡ್, ಆಸ್ಟ್ರೇಲಿಯಾ, ಫ್ರಾನ್ಸ್, ಕೆನಡಾ, ಜಪಾನ್ ಇನ್ನು ಮುಂತಾದ ದೇಶಗಳ ಸಂವಿಧಾನಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ ಪ್ರಜಾಪ್ರಭುತ್ವ (ಭಾರತ) ದೇಶಕ್ಕೆ ಅಗತ್ಯವಾದ ಅಂಶಗಳನ್ನು ಕ್ರೋಢೀಕರಿಸಿ, ಅಂತಿಮವಾಗಿ ದೇಶದ ಸಂವಿಧಾನಕ್ಕೆ ಒಂದು ಚೌಕಟ್ಟನ್ನು ರೂಪಿಸಿದ ಫಲವಾಗಿ, ಭಾರತದ ಸಂವಿಧಾನ ಅತ್ಯಂತ ವಿಶಿಷ್ಟ ಹಾಗೂ ಸುಂದರವಾಗಿ ಮೂಡಿ ಬಂದಿತು.




ಹೀಗೆ ರಚನೆಗೊಂಡ ಸಂವಿಧಾನವನ್ನು 1949 ರ ನವೆಂಬರ್ 26 ರಂದು ಅಂಗೀಕರಿಸಲಾಯಿತು. ಈ ದಿನ ಭಾರತೀಯರ ಪಾಲಿಗೆ ಅತ್ಯಂತ ಮಹತ್ವದ ದಿನ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಇಂದಿಗೆ (26.11.2024) ಸಂವಿಧಾನವನ್ನು ಅಂಗೀಕರಿಸಿ 75 ವರ್ಷ ಸಂದ ಹಿನ್ನೆಲೆಯಲ್ಲಿ ದೇಶಾದ್ಯಂತ ಹಲವು ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ "ಸಂವಿಧಾನ ದಿನ"ವನ್ನು ಅತ್ಯಂತ ವಿಶೇಷ, ವಿಶಿಷ್ಟ ಹಾಗೂ ಅಷ್ಟೇ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ.

ರಚಿತಗೊಂಡ ಸಂವಿಧಾನ ಮೂಲತಃ 22 ಅಧ್ಯಾಯಗಳು, 395 ವಿಧಿಗಳು ಮತ್ತು 8 ಅನುಸೂಚಿಗಳನ್ನು ಒಳಗೊಂಡಿದ್ದು, ಪ್ರಸ್ತುತದಲ್ಲಿ 448 ವಿಧಿಗಳು, 25 ಅಧ್ಯಾಯಗಳು ಮತ್ತು 12 ಅನುಸೂಚಿಗಳನ್ನು ಒಳಗೊಂಡಿದೆ. ಇದು ವಿಶ್ವದಲ್ಲಿಯೇ ಅತ್ಯಂತ ವ್ಯಾಪಕ ಮತ್ತು ಸುದೀರ್ಘ ಲಿಖಿತ ಸಂವಿಧಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕೈ ಬರಹದಲ್ಲಿ ಬರೆದ ಸಂವಿಧಾನದ ಮೂಲ ಪ್ರತಿಯನ್ನು ಈಗಲೂ ಪಾರ್ಲಿಮೆಂಟ್ ಹೌಸ್‌ನಲ್ಲಿ ಸಂರಕ್ಷಿಸಿಡಲಾಗಿದೆ. ಅಂತಿಮವಾಗಿ ಇದು 1950 ಜನವರಿ 26 ರಂದು ಜಾರಿಗೆ ಬಂದಿತು.

ಸಂವಿಧಾನವು ಲಿಖಿತ ಸಂವಿಧಾನ, ವಯಸ್ಕ ಮತದಾನ ಪದ್ಧತಿ, ರಾಜ್ಯ ನೀತಿಯ ನಿರ್ದೇಶಾತ್ಮಕ ತತ್ವಗಳು, ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ, ಬಹುಪಕ್ಷ ಪದ್ಧತಿ, ಕಲ್ಯಾಣ ರಾಜ್ಯ ಸ್ಥಾಪನೆ, ಗಣತಂತ್ರ ವ್ಯವಸ್ಥೆ, ಸಂಸದೀಯ ಸರ್ಕಾರ ಪದ್ಧತಿ, ಏಕ ಪೌರತ್ವ, ತುರ್ತು ಪರಿಸ್ಥಿತಿಯ ಅಧಿಕಾರಗಳು, ಪಂಚವಾರ್ಷಿಕ ಯೋಜನಾ ವ್ಯವಸ್ಥೆಯಂತಹ ಲಕ್ಷಣಗಳನ್ನು ಒಳಗೊಂಡಿದ್ದು, ಆರು ಮೂಲಭೂತ ಹಕ್ಕುಗಳು ಹಾಗೂ ಹತ್ತು ಮೂಲಭೂತ ಕರ್ತವ್ಯಗಳನ್ನು ಒಳಗೊಂಡಿದೆ.ಇದೀಗ ಹನ್ನೊಂದನೇ ಮೂಲಭೂತ ಕರ್ತವ್ಯವನ್ನು ಸೇರ್ಪಡೆ ಮಾಡಲಾಗಿದೆ. ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಅದರ ಮೂಲ ಆಶಯಗಳನ್ನು ಸವಿವರವಾಗಿ ಸಾದರಪಡಿಸಲಾಗಿದೆ.

ದೇಶದ ಭವಿಷ್ಯ ಪ್ರಜ್ಞಾವಂತ ಪ್ರಜೆಗಳ ಕೈಲಿ ಅಡಗಿದೆ ಎಂಬುದನ್ನು ಪ್ರತಿಯೊಬ್ಬರೂ ಅರಿತುಕೊಂಡಾಗ ಮಾತ್ರ ಸಂವಿಧಾನದ ಘನತೆ ಮತ್ತು ಪಾವಿತ್ರ್ಯತೆಯನ್ನು ಎತ್ತಿ ಹಿಡಿಯಲು ಸಾಧ್ಯ. ಡಾ. ಬಿ.ಆರ್. ಅಂಬೇಡ್ಕರ್ ರಚಿಸಿದ ಸಂವಿಧಾನಕ್ಕೆ ಕಿಂಚಿತ್ತೂ ದೋಷವಾಗದಂತೆ ನಾವೆಲ್ಲರೂ ನಡೆದುಕೊಳ್ಳಬೇಕು. ಪ್ರತಿನಿತ್ಯ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸಂವಿಧಾನದ ಪೂರ್ವ ಪೀಠಿಕೆಯನ್ನು ಓದುವುದರ ಮೂಲಕ ಸಂವಿಧಾನದ ಆಶಯ ಏನೆಂಬುದನ್ನು ಅರ್ಥಮಾಡಿಕೊಂಡು ಅದರಂತೆ ನಡೆದುಕೊಳ್ಳಲು ಪ್ರಯತ್ನಿಸಬೇಕು.

ಈ ಹಿನ್ನೆಲೆಯಲ್ಲಿ ಜನಪರ ಸರ್ಕಾರಗಳು, ಜನ ಪ್ರತಿನಿಧಿಗಳು ಹಾಗೂ ಪ್ರತಿಯೊಬ್ಬ ಪ್ರಜೆ ದೇಶದ ಹಿತ ಮತ್ತು ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನಕ್ಕೆ ಬದ್ಧವಾಗಿ ನಡೆದುಕೊಂಡಲ್ಲಿ ಇದರ ಆಚರಣೆಗೆ ಒಂದರ್ಥ ಬರುತ್ತದೆ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

**- ಡಾ. ಎಸ್. ಶಿವಯ್ಯ**
ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ.

# ಟ್ರಂಪ್ ಅಧ್ಯಕ್ಷರಾದ ನಂತರ ಅದಾನಿ ದೋಷಾರೋಪ ವಾಪಸ್ ಸಾಧ್ಯತೆ

ನ್ಯೂಯಾರ್ಕ್, ನ. 26 – ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರ ವಹಿಸಿಕೊಂಡ ನಂತರ, ಉದ್ಯಮಿ ಗೌತಮ್ ಅದಾನಿ ವಿರುದ್ಧದ ಆರೋಪಗಳು ದೋಷಪೂರಿತ, ಇಲ್ಲವೇ ಯೋಗ್ಯವಲ್ಲದ್ದು ಎಂದು ಭಾವಿಸಿದರೆ ದೋಷಾರೋಪ ರದ್ದುಗೊಳಿಸಬಹುದು ಎಂದು ಪ್ರಮುಖ ಅಟಾರ್ನಿ ಒಬ್ಬರು ಹೇಳಿದ್ದಾರೆ.

ಪ್ರತಿ ಹೊಸ ಅಧ್ಯಕ್ಷರೂ ತಮ್ಮದೇ ಆದ ತಂಡ ಹೊಂದಿರುತ್ತಾರೆ. ಟ್ರಂಪ್ ಅಧ್ಯಕ್ಷರಾದ ನಂತರ ಯಾವುದೇ ದೋಷಾರೋಪವನ್ನು ವಾಪಸ್ ಪಡೆಯಲು ಅವಕಾಶ ಇದೆ ಎಂದು ಭಾರತೀಯ ಮೂಲದ ಅಮೆರಿಕದ ಅಟಾರ್ನಿ ರವಿ ಬಾತ್ರ ಹೇಳಿದ್ದಾರೆ.

# ಮಲೇಬೆನ್ನೂರು: ಕನಕದಾಸರ ಜಯಂತಿಯ ಶೋಭಾಯಾತ್ರೆ

ಮಲೇಬೆನ್ನೂರು, ನ.26- ಇಲ್ಲಿನ ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಸಂಘದ ವತಿಯಿಂದ ಸೋಮವಾರ ಸಂಜೆ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ದಾಸಶ್ರೇಷ್ಠ ಭಕ್ತ ಕನಕದಾಸರ 537ನೇ ಜಯಂತ್ಯೋತ್ಸವದ ಶೋಭಾಯಾತ್ರೆ ಸಂಭ್ರಮದಿಂದ ಜರುಗಿತು.



ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್ ಅವರು ಕನಕದಾಸರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಶೋಭಾಯಾತ್ರೆಗೆ ಚಾಲನೆ ನೀಡಿದರು.

ಶೋಭಾಯಾತ್ರೆ ಪಟ್ಟಣದ ರಾಜಬೀದಿಗಳಲ್ಲಿ ಸಂಚರಿಸಿತು. ಹೊರ ಬೀರಪ್ಪನ ದೇವಸ್ಥಾನದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ತಾ. ಕುರುಬರ ಸಂಘದ ಅಧ್ಯಕ್ಷ ಪೂಜಾರ್ ಹಾಲೇಶಪ್ಪ, ಮುಖಂಡರಾದ ಪೂಜಾರ್ ಗಂಗೇನಳ್ಳಪ್ಪ, ಪೂಜಾರ್ ನಾಗಪ್ಪ, ಜಿ. ಮಂಜುನಾಥ್ ಪಟೇಲ್, ಐರಣಿ ಅಣ್ಣಪ್ಪ, ವೈ.ಎನ್. ಮಹೇಶ್, ಕೆ.ಪಿ. ಗಂಗಾಧರ್, ಸೈಯದ್ ಜಾಕೀರ್, ಪಿ.ಬಿ. ಬೀರಪ್ಪ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಬಿ. ಮಂಜುನಾಥ್, ಮುಖ್ಯಾಧಿಕಾರಿ ಭಜಕ್ಕನವರ್, ಪುರಸಭೆ ಸದಸ್ಯರಾದ ನಯಾಜ್, ಸಾಬೀರ್ ಅಲಿ, ದಾದಾಪೀರ್, ಷಾ ಅಬ್ರಾರ್, ಬಸವರಾಜ್ ದೊಡ್ಮನಿ, ಎಕ್ಕೆಗೊಂದಿ ಕರಿಯಪ್ಪ, ಚಮನ್ ಷಾ, ಎಂ.ಬಿ. ರುಸ್ತುಂ, ಎಳೆಹೊಳೆ ಕುಮಾರ್, ಭೋವಿಕುಮಾರ್, ಪಿ.ಆರ್.ಕುಮಾರ್, ಪಿ.ಹೆಚ್. ಶಿವಕುಮಾರ್, ರಾಯಣ್ಣ ಸಂಘದ ಡಿ.ಬಿ. ಬೀರೇಶ್, ಎಳೆಹೊಳೆ ಶರತ್, ಹುಳ್ಳಿ ಮಹೇಶ್, ಪಿ.ಕೆ. ಭರತ್, ಕಿರಣ್, ಜಿಗಳೇರ ಆನಂದ್ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ಬಿಜೆಪಿ ಬಲವರ್ಧನೆಗೆ ಕ್ಷೇತ್ರ ಸಂಚಾರ

**(1ನೇ ಪುಟದಿಂದ)** ಸಂವಿಧಾನ ನೀಡಿದ ಹಕ್ಕುಗಳಿಂದಲೇ ರಾಜಕೀಯವಾಗಿ ಉನ್ನತ ಸ್ಥಾನಮಾನದಲ್ಲಿದ್ದೇವೆ. ಸಂವಿಧಾನದ ದಿನದಂದು ರವೀಂದ್ರನಾಥ ಅವರ ಜನ್ಮದಿನ ಆಚರಿಸುತ್ತಿರುವುದು ಸಂತಸ ತಂದಿದೆ. ಅವರ ಸರಳ, ಸಜ್ಜನಿಕೆ, ದಕ್ಷ, ಪ್ರಾಮಾಣಿಕ ಸೇವೆ ಎಲ್ಲರಿಗೂ ಸ್ಫೂರ್ತಿಯಾಗಲಿ ಎಂದು ಶುಭ ಹಾರೈಸಿದರು.

ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಶಕ್ತಿ ಮತ್ತಷ್ಟು ವೃದ್ಧಿಯಾಗಲಿ. ಅಧಿಕಾರದ ಚುಕ್ಕಾಣಿ ಹಿಡಿಯುವ ಮೂಲಕ ರಾಜ್ಯದ ಜನತೆಗೆ ಉತ್ತಮ ಆಡಳಿತ ನೀಡುವಂತಾಗಲಿ ಎಂದು ಹಿತ ನುಡಿದರು.

ವೀರೇಂದ್ರ ಪಾಟೀಲ್ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ರೈತರ ಸಾಲ ಮನ್ನಾ ಮಾಡಿಸಿದ್ದೇನೆ ಎಂದ ಅವರು, ರಾಜ್ಯದಲ್ಲಿ ಬಿಜೆಪಿ ಪ್ರಜ್ವಲವಾಗಲಿ ಎಂದರು.

**ಬಿ.ವೈ. ವಿಜಯೇಂದ್ರ ರಾಜ್ಯದ ಮುಂದಿನ ಸಿಎಂ?:** ನಾಡು ಕಂಡ ಅಪರೂಪದ, ಧೀಮಂತ ರಾಜಕಾರಣಿ, ರೈತ ನಾಯಕ, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಬಿಜೆಪಿಯನ್ನು ಕಟ್ಟಿ ಬೆಳೆಸಿದವರು. ಬಿಎಸ್‌ವೈ ರಾಜ್ಯಮಟ್ಟದಲ್ಲಿ 'ರಾಜಾಹುಲಿ' ಆದರೆ ಜಿಲ್ಲೆಯಲ್ಲಿ ರವೀಂದ್ರನಾಥ್ 'ರಾಜಾಹುಲಿ' ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹೇಳಿದರು.

ಮುಂದಿನ ಚುನಾವಣೆ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿಯೇ ನಡೆಯುತ್ತದೆ. ಮುಂದಿನ ಮುಖ್ಯಮಂತ್ರಿ ಕೂಡ ವಿಜಯೇಂದ್ರ ಅವರೇ ಎಂದರು.

ರವೀಂದ್ರನಾಥ್ ಅವರು ಕೃಷಿ, ನೀರಾವರಿ, ಸಕ್ಕರೆ, ತೋಟಗಾರಿಕೆ ಮಂತ್ರಿಯಾಗಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಭದ್ರಾ ಸುಭದ್ರವಾಗಿರಲು ಹೋರಾಟ ಮಾಡಿದ ದಿಟ್ಟ ಹೋರಾಟಗಾರ. ಚುನಾವಣಾ ಕಣದಿಂದ ನಿವೃತ್ತಿಯಾಗಿದ್ದಾರೆಯೇ ಹೊರತು, ರಾಜಕೀಯದಿಂದ ಅಲ್ಲ. ಅವರ ಮಾರ್ಗದರ್ಶನ ಮತ್ತು ಜಿಲ್ಲಾಧ್ಯಕ್ಷರ ನೇತೃತ್ವದಲ್ಲಿ ಮತ್ತೆ ಬಿಜೆಪಿಯನ್ನು ಬಲಪಡಿಸಲಾಗುವುದು ಎಂದರು.

ಉಪ ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ ಸೋಲಾಗಿರುವುದಕ್ಕೆ ಯಾರೂ ಧೃತಿಗೆಡಬೇಕಾದ ಅಗತ್ಯವಿಲ್ಲ. ಉಪ ಚುನಾವಣೆ ದಿಕ್ಸೂಚಿಯಲ್ಲ. ಹಣ, ತೋಳ್ಬಲದಿಂದ ಕಾಂಗ್ರೆಸ್ ಗೆಲುವು ಸಾಧಿಸಿದೆ. ಕೆಲವರು ರಾಜ್ಯಾಧ್ಯಕ್ಷ ವಿಜಯೇಂದ್ರ ಸೋಲಿಗೆ ಕಾರಣ ಎನ್ನುತ್ತಾರೆ. ಆದರೆ ಕೆಲವರ ಸ್ವಯಂಕೃತ ಅಪರಾಧದಿಂದ ಸೋಲಾಗಿದೆ ಎನ್ನುವುದನ್ನು ಮರೆಯಬಾರದು ಎಂದು ಹೇಳಿದರು.

ಯಡಿಯೂರಪ್ಪ ಅವರ ಬಳಿ ಉಂಡು, ತಿಂದು, ದುಡ್ಡು ಮಾಡಿಕೊಂಡು ಅವರ ವಿರುದ್ಧ ಆರೋಪ ಮಾಡುತ್ತಿರುವುದನ್ನು ಕಂಡರೆ ಮನಸ್ಸಿಗೆ ತುಂಬಾ ನೋವಾಗುತ್ತದೆ. ಬಿಎಸ್‌ವೈ ಮತ್ತು ವಿಜಯೇಂದ್ರ ಅವರ ವಿರುದ್ಧ ಆರೋಪ ಮಾಡುವುದು ಸಲ್ಲದು ಎಂದು ತಾಕೀತು ಮಾಡಿದರು.

ಎಸ್ಎಆರ್ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡಿಲ್ಲ. ಸೋಲಿಗೆ ನಿಮ್ಮ ಸ್ವಯಂಕೃತ ಅಪರಾಧವೇ ಕಾರಣ. ಇದಕ್ಕೆ ಮತದಾರರಲ್ಲ ಎಂದು ಹೆಸರು ಹೇಳದೇ ಸಿದ್ದೇಶ್ವರ್ ಅವರಿಗೆ ಟಾಂಗ್ ನೀಡಿದರು.

ಹಿಂದೂ ಹುಲಿ ಎಂದು ಸ್ವಯಂಘೋಷಣೆ ಮಾಡಿಕೊಂಡವರಿಗೇನು ಗೊತ್ತು ರಾಜಾಹುಲಿ ಬಿಎಸ್‌ವೈ ಸಾಮರ್ಥ್ಯ ಎಂದು ಯತ್ನಾಳ್ ಬಗ್ಗೆ ತೀವ್ರ ಆಕ್ರೋಶ ಹೊರಹಾಕಿದರು.

ಚನ್ನಗಿರಿ ಮಾಜಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ಮಾತನಾಡಿ, ರವೀಂದ್ರನಾಥ ಸರಳ, ಸಜ್ಜನಿಕೆಯ ವ್ಯಕ್ತಿತ್ವದವರು. ಸಚಿವರಾದ ಸಂದರ್ಭದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಕುಡಿಯುವ ನೀರಿನ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರುವಲ್ಲಿ ಶ್ರಮಿಸಿದ್ದಾರೆಂದರು.

ರೈತರನ್ನು ಚೀನಾ ಮತ್ತು ಇಸ್ರೇಲ್ ದೇಶಗಳಿಗೆ ಕರೆದೊಯ್ದು ಆಧುನಿಕ ಬೇಸಾಯ ಪದ್ಧತಿಯ ಬಗ್ಗೆ ತಿಳಿಸಿಕೊಟ್ಟವರು. ರೈತರ ಪರ ಅತ್ಯಂತ ಕಾಳಜಿ ವಹಿಸಿದ ನಾಯಕರು. ಅದರಂತೆ ದಕ್ಷಿಣ ಭಾರತದಲ್ಲಿಯೇ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಪಕ್ಷ ಕಾಲೆಳೆಯುವವರಿಂದಲೇ ಅಧೋಗತಿಗೆ ಹೋಗುತ್ತಿದೆ ಎಂದು ವಿಷಾದಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ರಾಜಶೇಖರ ನಾಗಪ್ಪ ಸೇರಿದಂತೆ ಬಿಜೆಪಿ ಮುಖಂಡರಾದ ಮಾಡಾಳು ಮಲ್ಲಿಕಾರ್ಜುನ್, ಎಂ. ಬಸವರಾಜನಾಯ್ಕ, ಅರುಣ್ ಕುಮಾರ್ ಪೂಜಾರ, ಹೆಚ್.ಪಿ. ರಾಜೇಶ್, ಚಂದ್ರಶೇಖರ್ ಪೂಜಾರ್ ಬಿಎಸ್‌ವೈ ಮತ್ತು ಎಸ್ಎಆರ್ ಅವರ ರಾಜಕೀಯ ವೈಖರಿ ಕುರಿತು ಮಾತನಾಡಿದರು.

ವಿಧಾನ ಪರಿಷತ್ ಮಾಜಿ ಮುಖ್ಯಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಮಾಜಿ ಶಾಸಕ ಪ್ರೊ. ಲಿಂಗಣ್ಣ, ಮುಖಂಡರಾದ ಲೋಕಿಕೆರೆ ನಾಗರಾಜ್, ಬಿ.ಜಿ. ಅಜಯಕುಮಾರ್, ಎಲ್.ಎನ್. ಕಲ್ಲೇಶ್, ಧನಂಜಯ ಕಡ್ಲೇಬಾಳು, ವೈ. ಮಲ್ಲೇಶ್, ಜಗದೀಶ ಬಣಕಾರ್, ಮರಿಸ್ವಾಮಿ ಬೆಂಗಳೂರು, ಅಣಬೇರು ರಾಜಣ್ಣ, ಅನಿಲ್ ಕುಮಾರ್, ಐರಣಿ ಅಣ್ಣೇಶ್, ಆಲೂರು ನಿಂಗರಾಜ್, ಬಿ.ಎಂ. ಸತೀಶ್ ಕೊಳೇನಹಳ್ಳಿ, ವೀರೇಂದ್ರ ಪಾಟೀಲ್ ಮತ್ತಿತರರು ಭಾಗವಹಿಸಿದ್ದರು.

## ಪಕ್ಷ ಸಂಘಟನೆಗೆ ಒಟ್ಟಾಗುತ್ತೇವೆ

**(1ನೇ ಪುಟದಿಂದ)** ಮಾಡೋಣ, ಕೊರತೆ ಇದ್ದರೆ ಸರಿಪಡಿಸಿ ಮುಂದೆ ಸಾಗೋಣ ಹಾಗೂ ಪಕ್ಷ ಬಲವರ್ಧನೆಯತ್ತ ಗಮನಹರಿಸೋಣ ಎಂದು ಶಾಸಕ ಯತ್ನಾಳ್ ಟೀಂಗೆ ಸಲಹೆ ನೀಡಿದರು.

ಕಾಂಗ್ರೆಸ್‌ನವರು ಜೆಡಿಎಸ್ ಶಾಸಕರನ್ನು ಸೆಳೆಯುವ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಬಿಎಸ್‌ವೈ ಅವರು, ಕೆಲವರು ಉದ್ದೇಶಪೂರ್ವಕವಾಗಿ ಅಪಪ್ರಚಾರ ಮಾಡುತ್ತಿದ್ದಾರೆ. ಬಿಜೆಪಿ - ಜೆಡಿಎಸ್ ಒಟ್ಟಾಗಿಯೇ ಮುಂದಿನ ಚುನಾವಣೆಯನ್ನು ಎದುರಿಸುತ್ತೇವೆ ಎಂದರು.

ಕುಮಾರಸ್ವಾಮಿ, ದೇವೇಗೌಡರು ಸೇರಿದಂತೆ, ಬಿಜೆಪಿ-ಜೆಡಿಎಸ್ ಮುಖಂಡರು ಒಂದಾಗಿದ್ದೇವೆ. ಪಕ್ಷದಲ್ಲಿ ಅನೇಕ ಮಾಜಿ ಶಾಸಕರಿದ್ದಾರೆ. ಗೆದ್ದು ಬಿಜೆಪಿ ಸರ್ಕಾರವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರುತ್ತೇವೆ. ಸದ್ಯದ ವಾತಾವರಣ ಚನ್ನಾಗಿಯೇ ಇದೆ. ಪಕ್ಷ ಸಂಘಟನೆಗೆ ರಾಜ್ಯ ಪ್ರವಾಸ ಮಾಡುತ್ತೇವೆ ಎಂದು ಹೇಳಿದರು.

ಕಾಂಗ್ರೆಸ್‌ನವರ ಯಾವುದೇ ಪೊಳ್ಳು ಭರವಸೆಗೆ ಮರುಳಾಗದೇ ಬಿಜೆಪಿಯನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಬ್ರಿಟಿಷರನ್ನು ಓಡಿಸಿದ ಕಾಂಗ್ರೆಸ್‌ಗೆ ಬಿಜೆಪಿ ಯಾವ ಲೆಕ್ಕ ಎಂಬ ಶಿವರಾಜ್ ತಂಗಡಗಿ ಹೇಳಿಕೆ ವಿಚಾರದ ಬಗ್ಗೆ ಕೇಳಲಾದ ಪ್ರಶ್ನೆಗೆ ಅಂತವರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಅಂತವರ ಕುರಿತು ನಾನು ಪ್ರತಿಕ್ರಿಯಿಸುವುದಿಲ್ಲ ಎಂದರು.

# ಸಿಬಿಐಗೆ ಮುಡಾ : ವಿಚಾರಣೆ ಮುಂದಕ್ಕೆ

**(1ನೇ ಪುಟದಿಂದ)** ವಿಚಾರಣೆಯನ್ನು ವಿಭಾಗೀಯ ಪೀಠ ಡಿಸೆಂಬರ್ 5ಕ್ಕೆ ಮುಂದೂಡಿದೆ, ಆದ್ದರಿಂದ ಈ ಅರ್ಜಿ ವಿಚಾರಣೆಯನ್ನು ಡಿಸೆಂಬರ್ 9ಕ್ಕೆ ಮುಂದೂಡಲು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸ್ನೇಹಮಯಿ ಕೃಷ್ಣ ಪರ ವಕೀಲ ಕೆ.ಜಿ.ರಾಘವನ್, ಮೇಲ್ಮನವಿ ಹಿನ್ನೆಲೆಯಲ್ಲಿ ಅರ್ಜಿ ವಿಚಾರಣೆ ಮುಂದೂಡಬಾರದೆಂದು ಮನವಿ ಮಾಡಿದರು.

ಮೇಲ್ಮನವಿಗೂ ಈ ಪ್ರಕರಣದ ವಿಚಾರಣೆಗೂ ಸಂಬಂಧವಿಲ್ಲ ಎಂದು ನ್ಯಾಯಮೂರ್ತಿಗಳು ಅಭಿಪ್ರಾಯ ವ್ಯಕ್ತಪಡಿಸಿದರಾದರೂ, ಪದೇ ಪದೇ ದೇವರಾಜು ಪರ ವಕೀಲರ ಮನವಿಗೆ ಸ್ಪಂದಿಸಿ ವಿಚಾರಣೆಯನ್ನು ಡಿಸೆಂಬರ್ 10ಕ್ಕೆ ಮುಂದೂಡಿದರು. ಲೋಕಾಯುಕ್ತ ತನಿಖೆಯನ್ನೇ ಪ್ರಶ್ನಿಸಿ ಭೂಮಾಲೀಕರು ಮೇಲ್ಮನವಿ ಸಲ್ಲಿಸಿರುವುದರಿಂದ ಇಂದು ಅವರು ತಮ್ಮ ವರದಿಯನ್ನು ಪೀಠಕ್ಕೆ ಸಲ್ಲಿಸಲಿಲ್ಲ.

ಕಳೆದ ವಿಚಾರಣೆ ವೇಳೆ ಮುಡಾಗೆ ಸಂಬಂಧಿಸಿದಂತೆ ಲೋಕಾಯುಕ್ತ ತನಿಖಾ ವರದಿಯನ್ನು ನವೆಂಬರ್ 26ಕ್ಕೆ ಸಲ್ಲಿಸುವಂತೆ ಪೀಠ ಸೂಚಿಸಿತ್ತು. ಆದರೆ, ಲೋಕಾಯುಕ್ತರು ತನಿಖಾ ವರದಿ ಸಲ್ಲಿಸಲು ತಮ್ಮ ವಕೀಲರ ಮೂಲಕ ಮತ್ತಷ್ಟು ಸಮಯ ಕೋರುವ ಸಿದ್ಧತೆಯಲ್ಲಿದ್ದರು. ಈ ವೇಳೆಗೆ ನ್ಯಾಯಮೂರ್ತಿಗಳು ವಿಚಾರಣೆಯನ್ನು ಮುಂದೂಡುವ ಸಂದರ್ಭದಲ್ಲಿ ಲೋಕಾಯುಕ್ತ ವರದಿಯನ್ನೂ ಅಂದೇ ಸಲ್ಲಿಸುವಂತೆ ಆದೇಶಿಸಿದರು. ಲೋಕಾಯುಕ್ತ ತನಿಖೆಯ ವಿಶ್ವಾಸಾರ್ಹತೆ ಪ್ರಶ್ನಿಸಿ ಸ್ನೇಹಮಯಿ ಕೃಷ್ಣ ಹೈಕೋರ್ಟ್ ಮೆಟ್ಟಿಲೇರಿರುವುದಲ್ಲದೆ, ಪ್ರಕರಣದ ಸತ್ಯಾಸತ್ಯತೆ ಅರಿಯಲು ಸಿಬಿಐಗೆ ವಹಿಸುವಂತೆ ಅವರು ಮನವಿ ಮಾಡಿದ್ದರು.

ಸರ್ಕಾರದ ಅಧೀನದಲ್ಲಿ ಲೋಕಾಯುಕ್ತ ಸಂಸ್ಥೆ ಇರುವುದರಿಂದ ನಮಗೆ ಈ ತನಿಖೆಯಿಂದ ನ್ಯಾಯ ಸಿಗುವ ವಿಶ್ವಾಸವಿಲ್ಲದ ಹಿನ್ನೆಲೆಯಲ್ಲಿ ಸಿಬಿಐಗೆ ವಹಿಸಲು ಹೈಕೋರ್ಟ್‌ಗೆ ಮನವಿ ಮಾಡಿಕೊಂಡಿದ್ದಾರೆ.

# ಮಹಾರಾಷ್ಟ್ರ ಸಿಎಂ ರಾಜೀನಾಮೆ

**(1ನೇ ಪುಟದಿಂದ)** ಹೊಂದಿಲ್ಲ. ನಾವು ನಿರ್ಣಾಯಕ ಜನಾದೇಶ ಪಡೆದಿದ್ದೇವೆ. ಸರ್ಕಾರದ ಸ್ವರೂಪದ ಬಗ್ಗೆ ಸಮಗ್ರ ಯೋಜನೆ ರೂಪಿಸಬೇಕಿದೆ. ಸಚಿವ ಸಂಪುಟ ಹಾಗೂ ಪ್ರಮುಖ ಹುದ್ದೆಗಳ ಬಗ್ಗೆ ನಿರ್ಧರಿಸಬೇಕಿದೆ. ಜಿಲ್ಲಾ ಉಸ್ತುವಾರಿ ಸಚಿವರ ಬಗ್ಗೆಯೂ ನಿರ್ಧರಿಸಬೇಕಿದೆ ಎಂದು ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ.

ಮೈತ್ರಿ ಪಕ್ಷಗಳ ನಡುವೆ ಘರ್ಷಣೆಯಾಗುವುದನ್ನು ತಪ್ಪಿಸಲು ಎಚ್ಚರಿಕೆ ವಹಿಸಲಾಗುತ್ತಿದೆ ಎಂದವರು ಹೇಳಿದ್ದಾರೆ. ಮಹಾರಾಷ್ಟ್ರದಲ್ಲಿ 43 ಸಚಿವರಿಗೆ ಅವಕಾಶವಿದೆ. ರಾಜ್ಯದಲ್ಲಿ 36 ಜಿಲ್ಲೆಗಳಿವೆ.

ಬಿಜೆಪಿ ಕೇಂದ್ರ ನಾಯಕತ್ವ ವೀಕ್ಷಕರನ್ನು ಕಳಿಸಲಿದೆ. ಅವರು ಶಾಸಕರು ಹಾಗೂ ಪಕ್ಷದ ಹಿರಿಯ ಪದಾಧಿಕಾರಿಗಳ ಜೊತೆ ಚರ್ಚಿಸಿ ಸಂಪುಟ ರಚನೆಯ ಸೂತ್ರವನ್ನು ನಿರ್ಧರಿಸಲಿದ್ದಾರೆ. ನಂತರ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ನಡೆಯಲಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ 40X60 ಉತ್ತರ, ಕಮರ್ಷಿಯಲ್ ಆಗುವಂತಹ, 120 ಅಡಿ ರಸ್ತೆಗೆ, 40x60 ಸೌತ್, 40 ಅಡಿ ರಸ್ತೆಗೆ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಸೈಟ್, ಮನೆ, ಜಮೀನು**
ನೇರ ವ್ಯಾಪಾರ, ಸ್ವಚ್ಛ ದಾಖಲೆ, ಸರಿಯಾದ ಅಳತೆಯ ಗುರಿ ನನ್ನದು. ಅರ್ಧ (1/2%) ಪರ್ಸೆಂಟ್ ಕಮಿಷನ್‌ಗೆ ಕೊಡಿಸುತ್ತೇನೆ, ಮಾರಿಸುತ್ತೇನೆ.
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ದಯವಿಟ್ಟು ನಿಮ್ಮ ಸ್ನೇಹಿತರಿಗೆ. ಬಂಧು-ಬಳಗದವರಿಗೆ ತಿಳಿಸಿರಿ)

**ಬೇಕಾಗಿದ್ದಾರೆ**
ಮಗು ನೋಡಿಕೊಳ್ಳಲು, ಅಡುಗೆ ಮಾಡಲು ಮತ್ತು ಮನೆ ಕೆಲಸ ಮಾಡಲು ಅನುಭವವಿರುವ ಹೆಣ್ಣು ಮಗಳು ಬೇಕಾಗಿದ್ದಾರೆ.
81477-83803, 98449-69738

**ಕಮರ್ಷಿಯಲ್ ಸೈಟ್‌ಗಳು ಮಾರಾಟಕ್ಕಿವೆ**
ಶಕ್ತಿನಗರ ಹತ್ತಿರ, ಭಗೀರಥ ಸರ್ಕಲ್ ಹತ್ತಿರ, 22 1/2x40, 22 1/2x40 South ಅಕ್ಕ-ಪಕ್ಕ. Rate : 6500/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಪಂಚಾಯಿತಿ ಡೋರ್ ನಂಬರ್, ದೂಡಾ ಫೈನಲ್ ಅಪ್ರೂವಲ್ ಸೈಟ್, ಕಡಿಮೆ ದರದಲ್ಲಿ ಸಿಗುತ್ತವೆ. 1 ಅಡಿಗೆ 980 ರೂಪಾಯಿಗೆ ಸಿಗಲಿವೆ.
86183 43463
86187 28546

**ಬೇಕಾಗಿದ್ದಾರೆ**
ಮನೆ ಕೆಲಸ, ಅಡುಗೆ ಮತ್ತು ಮಗುವನ್ನು ನೋಡಿಕೊಳ್ಳಲು ಕೆಲಸದವರು ಬೇಕಾಗಿದ್ದಾರೆ. ಕೆಲಸದ ವೇಳೆ ಬೆಳಿಗ್ಗೆ 8 ರಿಂದ ಸಂಜೆ 8ರವರೆಗೆ. ತಿಂಗಳಿಗೆ 7 ಸಾವಿರ ಸಂಬಳ ಹಾಗು ವಾಸಕ್ಕೆ ಮನೆ ನೀಡಲಾಗುವುದು. ದಾವಣಗೆರೆ ಹೊಸ ಕೋರ್ಟ್ ಹತ್ತಿರ.
ಸಂಪರ್ಕಿಸಿ: 63660 20922

**ಕಟ್ಟಡ ಬಾಡಿಗೆಗೆ**
ಕಾಲೇಜು ಅಥವಾ ತರಬೇತಿ ಕೇಂದ್ರಕ್ಕಾಗಿ ಬಾಡಿಗೆಗೆ ಕಟ್ಟಡ ಲಭ್ಯವಿದೆ. ಹರಿಹರ, ಕಾಳಿದಾಸ ನಗರದಲ್ಲಿ ಪ್ರಖ್ಯಾತ ಸ್ಥಳದಲ್ಲಿ ಕಾಲೇಜು ಅಥವಾ ತರಬೇತಿ ಕೇಂದ್ರಕ್ಕೆ ಸೂಕ್ತವಾದ ಬಾಡಿಗೆ ಕಟ್ಟಡ ಲಭ್ಯವಿದೆ.
ಸಂಪರ್ಕಿಸಿ: 63660 20922

**ಬಿಜಾಪುರದ ರೊಟ್ಟಿ ಸಿಗುತ್ತದೆ**
ಬಿಸಿ ಮತ್ತು ಖಡಕ್ ರೊಟ್ಟಿ ಹಾಗೂ ಎಲ್ಲಾ ಶುಭ ಸಮಾರಂಭಗಳಿಗೂ ಮಾಡಿಕೊಡಲಾಗುತ್ತದೆ.
97436 21785
98447 48815

**ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ**
ಶ್ರೀ ನಂಜುಂಡೇಶ್ವರ ಏಜೆನ್ಸೀಸ್
ಎಂ.ಜಿ. ರೋಡ್, ದಾವಣಗೆರೆ.
98457 33245

**HOUSES FOR RENT**
1 BHK, 2 BHK, 3BHK, MCC `B' Block, SS Layout A&B Block, Siddaveerappa Layout, Vidyanagara, Anjaneya Badavane.
Dasshith Iynahalli
96061 26471

**ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿ ಮತ್ತು ಆಡಿಟ್ ಆಫೀಸ್‌ನಲ್ಲಿ ಯಾವುದೇ ಡಿಗ್ರಿ, Tally + GST ಆದವರು ಹಾಗೂ ಮಾರಾಟ ಪ್ರತಿನಿಧಿಯಾಗಿ ಬೇಕಾಗಿದ್ದಾರೆ. ಸಂಪರ್ಕಿಸಿ :
99649 31098

**WANTED**
CIVIL ENGINEER'S
Freshers or with 2-3 years experienced, Projects at Shivamogga & Davngere.
80880 50729
89711 03671

**ವೈನ್ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**
ಶಾಮನೂರು ರೋಡ್, ದಾವಣಗೆರೆ.
98861 66432

**ಬೇಕಾಗಿದ್ದಾರೆ**
ರಾಂ ಅಂಡ್ ಕೋ ಸರ್ಕಲ್ ಬಳಿಯಿರುವ ಜೆರಾಕ್ಸ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ.
70221 58935

**ಸೈಟ್ ಮಾರಾಟಕ್ಕಿದೆ**
ಪಿಬಿ ರೋಡ್, ಹೀರೋ ಹೊಂಡಾ ಶೋ ರೂಂ ಹಿಂಭಾಗ, ಶಂಕರ ವಿಹಾರ ಬಡಾವಣೆ, 'ಬಿ' ಬ್ಲಾಕ್, 3ನೇ ಮುಖ್ಯರಸ್ತೆ, 2ನೇ ಅಡ್ಡ ರಸ್ತೆ, ದೇವರಾಜ್ ಅರಸ್ ಲೇಡಿಸ್ ಹಾಸ್ಟೆಲ್ ಎದುರುಗಡೆ, ಕಾರ್ನರ್ ಸೈಟ್, ಪೂರ್ವ, ಪಶ್ಚಿಮ 53 ಅಡಿ, ಉತ್ತರ-ದಕ್ಷಿಣ 40 ಅಡಿ ಅಳತೆಯ ಸೈಟ್ ಮಾರಾಟಕ್ಕಿದೆ.
94483 53127

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಉತ್ತಮ ಸಂಬಳ ನೀಡಲಾಗುವುದು. ಸಂಪರ್ಕಿಸಿ :
88676 77031

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ರಾಣೇಬೆನ್ನೂರಿನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ಆಕರ್ಷಕ ಸಂಬಳ : 8000-13000, ESI+EPF ಸೌಲಭ್ಯವಿದೆ.
88845 95873, 87478 59257, 96329 03976

**ಬೇಕಾಗಿದ್ದಾರೆ**
ಶ್ರೀ ಧನಲಕ್ಷ್ಮಿ ಇಂಡಸ್ಟ್ರೀಸ್ ಅಡಿಕೆ ತಟ್ಟೆ ಕೆಲಸಕ್ಕೆ ಪುರುಷ ಮತ್ತು ಮಹಿಳೆಯರು, ನಾರ್ತ್ ಇಂಡಿಯನ್ ಕೆಲಸಗಾರರು ಶಿರಮಗೊಂಡನಹಳ್ಳಿ, ಪಾಮೇನಹಳ್ಳಿ ರೋಡ್, ದಾವಣಗೆರೆ.
80503 53669

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ
(ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
9740064163

**ಆಸ್ತಿ ಮಾರಾಟಕ್ಕೆ ಇದೆ**
ಪಿ.ಜೆ. ಬಡಾವಣೆಯ 4 ನೇ ಮುಖ್ಯ ರಸ್ತೆಯಲ್ಲಿ ಪೂರ್ವಾಭಿಮುಖವಾಗಿರುವ ಅಂದಾಜು 3800 ಅಡಿ ಉಳ್ಳ ಜಾಗದಲ್ಲಿ ಮನೆಯಿದ್ದು ಪೂರಾ ಆಸ್ತಿ ಮಾರಾಟಕ್ಕೆ ಇದೆ.
98445 83442

**ಫ್ಲಾಟ್‌ಗಳು ಭೋಗ್ಯಕ್ಕಿವೆ**
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ಭೋಗ್ಯಕ್ಕಿವೆ.
ಬಿ.ಎಸ್. ಸಂತೋಷ
96322 67555

**TUITIONS**
CBSE / ICSE Boards Class 8th, 9th, 10th
CRASH COURSES FOR NEET / CET / IIT - JEE PUC I / PUC II / PCMB
NEET Long Term / Supplementary Exams
97398 65711, 94822 44114

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**EXPERIENCED**
SALESMAN required for ready made Men's Showroom.
74113 25767

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು. ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್ ರೈಸ್ ಸೆಂಟರ್ ಇತ್ಯಾದಿಗಳಿಗೆ ಹುಡುಗರು ಬೇಕಾಗಿದ್ದಾರೆ. ಶ್ರೀ ಸಾಯಿ ಎಗ್ ಸೆಂಟರ್‌ನಲ್ಲಿ ವಿದ್ಯಾರ್ಹತೆ : SSLC ಉತ್ತೀರ್ಣ, ಸಂಪರ್ಕಿಸಿ :
96860 22969

**3BHK HOUSE FOR RENT**
At Uttam Badavane, 1st main, B ward No - 30, Avaragere Road. Contact :
99015 64535
94498 04535

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ರಕ್ತ ದಾನ ಶ್ರೇಷ್ಠ ದಾನ**

**ಬಾಡಿಗೆಗೆ ಸಂಪರ್ಕಿಸಿ**
ಲಹರಿ ಆಟೋಮೋಟಿವ್ಸ್
#856/17, ಸಬ್ ರಿಜಿಸ್ಟರ್ ಆಫೀಸ್ ಎದುರುಗಡೆ, ಪಿಬಿ ರಸ್ತೆ, ದಾವಣಗೆರೆ-2. ಕೆಳಗಿನ ಮಹಡಿ 1500 ಅಡಿಗಳು, 1ನೇ ಮಹಡಿ 3500 ಅಡಿಗಳು, ಖಾಲಿ ಜಾಗ 4400 ಚ.ಅ., ಸೈಟ್ ಸೈಜ್ 50x88
98444 20009, 90711 19996

**Requirement**
Receptionist (only female)
Age: 20-25, Salary: 10,000 - 15,000
HAIRPOINT SALON
MCC `B' block, 7th main 3rd cross, Davanagere.
9148319342, 9738664400
08192220755

**ಬೇಕಾಗಿದ್ದಾರೆ**
ಲಾಡ್ಜ್ ನಲ್ಲಿ ಹಗಲು ಪಾಳೆಯದಲ್ಲಿ ಕೆಲಸ ಮಾಡಲು ರಿಸೆಪ್ಷನಿಸ್ಟ್ / Tally ಆಪರೇಟರ್ ಬೇಕಾಗಿದ್ದಾರೆ ಹಾಗೂ ರೂಂ ಬಾಯ್ಸ್ ಬೇಕಾಗಿದ್ದಾರೆ. 40 ವರ್ಷ ಮೇಲ್ಪಟ್ಟ ಪುರುಷರು. ಸಂಪರ್ಕಿಸಿ:
98451 51589

**2BHK ಮನೆ ಲೀಜ್‌ಗೆ ಇದೆ**
ಪೆಟ್ರೋಲ್ ಬಂಕ್ ಹಿಂಭಾಗ ಹರಿಹರ.
90088 00080

**Software web Developer ಬೇಕಾಗಿದ್ದಾರೆ**
ASP. NET BE/MCA freshers can apply 4 months training will be given send Your CV to shajmathews@gmail.com

**ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)**
ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಅಡಿಕೆ ತೋಟದ ರೈತ ಬಾಂಧವರೇ**
ಅಡಿಕೆ ಹಿಂಗಾರು ರೋಗಕ್ಕೆ ಕಾರಣವಾದ ರೋಗಾಣು (ಕೊಲೆಟೋ ಟ್ರಿಕಿಯಂ ಗ್ಲೋಯಸ್ಪೊರಿಡಿಯಸ್) ಇದರಿಂದ ಅಡಿಕೆ ಹಿಂಗಾರು ಒಣಗುವುದು ಮತ್ತು ಹಿಂಗಾರು ಕೊಳೆ ರೋಗ ಬರುತ್ತದೆ. ವೈಜ್ಞಾನಿಕವಾಗಿ ನಿಯಂತ್ರಿಸುವುದು ಹೇಗೆ ಎಂದು ಮಾಹಿತಿ ಕೊಡಲಾಗುವುದು ಹಾಗೂ ಅಡಿಕೆ ತೋಟದಲ್ಲಿ ಬೆಳೆಯುವ ಕಳೆಗಳಿಗೆ ನಮ್ಮಲ್ಲಿ ಸಾವಯವ ಕಳೆನಾಶಕ ದೊರೆಯುತ್ತದೆ.
ಸಂಪರ್ಕಿಸಿ :
98451 04109

**TUITIONS**
IGCSE, ICSE, CBSE and State Board from class 5th to 12th MCC 'A' blcok, Davangere.
98444 92888

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, PJ ಬಡಾವಣೆ ದಾವಣಗೆರೆ.

**FOR LEASE**
ಡಿ.ನಂ. 3100/51, ನೂತನ ಕಾಲೇಜು ರಸ್ತೆ, ವಿವೇಕಾನಂದ ಬಡಾವಣೆ, 34ನೇ ವಾರ್ಡ್, 7th C, ಶಿವ ಶಕ್ತಿ ಬ್ಲಾಕ್, ಅಳತೆ 30 X 50 ಅಡಿ, ಉತ್ತರಾಭಿಮುಖ, 1ನೇ ಮಹಡಿ ಡಬಲ್ ಬೆಡ್‌ರೂಮ್, 2ನೇ ಮಹಡಿ 3 ಬೆಡ್‌ರೂಮ್ ಮನೆ, ಮುನ್ಸಿಪಲ್ ನೀರು, ಬೋರ್‌ವೆಲ್ ನೀರು ಇರುವ ಮನೆ ಲಭ್ಯವಿದೆ.
95387 32909, 98444 56243

**ಶ್ರೀ ಸಾಯಿ ಕ್ಯಾಟರಿಂಗ್**
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಅಡುಗೆ ಮಾಡಿ ಕೊಡಲಾಗುವುದು. ಸಂಪರ್ಕಿಸಿ :
94489 24273

**HOUSE FOR RENT**
Available fully furnished home for Bachelors (Approx 8 to 10 Bachelors either fully Ladies / or Fully Gents) Near to old Janatha Lodge which is easily accessible to bus stand, Railway station. Contact :
91080 29438

**2 BHK ಮನೆ ಲೀಜ್‌ಗೆ ಇದೆ**
2ನೇ ಕ್ರಾಸ್, ರಾಷ್ಟ್ರೋತ್ಥಾನ ಸ್ಕೂಲ್ ಹತ್ತಿರ, ನಿಟುವಳ್ಳಿ-ದಾವಣಗೆರೆ.
99726 00306

# ವಕ್ಫ್: ಜನರ ದಾರಿ ತಪ್ಪಿಸುತ್ತಿರುವ ಕಾಂಗ್ರೆಸ್

## ಮಹಾನಗರ ಪಾಲಿಕೆ ವಿಪಕ್ಷ ನಾಯಕ ಪ್ರಸನ್ನಕುಮಾರ್ ಟೀಕೆ



ದಾವಣಗೆರೆ,ನ.26- ವಕ್ಫ್ ವಿಚಾರದಲ್ಲಿ ತಮ್ಮ ತಪ್ಪನ್ನು ಮುಚ್ಚಿ ಹಾಕಲು ಕಾಂಗ್ರೆಸ್ ಮುಖಂಡರು ಜನರನ್ನು ದಾರಿ ತಪ್ಪಿಸುತ್ತಿದ್ದಾರೆ ಎಂದು ಮಹಾನಗರ ಪಾಲಿಕೆ ಪ್ರತಿಪಕ್ಷ ನಾಯಕ ಪ್ರಸನ್ನಕುಮಾರ್ ಟೀಕಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಅನ್ವರ್ ಮಾನಪ್ಪಾಡಿ ಸಲ್ಲಿಸಿದ ವರದಿಯಲ್ಲಿ ಏಳು ಸಾವಿರ ಪುಟಗಳಿದ್ದು, ಕರ್ನಾಟಕದಲ್ಲಿ ವಕ್ಫ್ ಖಾತೆಯಲ್ಲಿ 54,000 ಎಕರೆ ಭೂಮಿ ಇದ್ದು, ಇದರಲ್ಲಿ ಸುಮಾರು 27,000 ಎಕರೆ ಪರಭಾರೆಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಅದರಲ್ಲಿ ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ, ವರದಿಯಲ್ಲಿ ಹಳೇಬಾತಿಯಲ್ಲಿರುವ 'ಹಜರತ್ ಶಾವಲಿ ದರ್ಗಾ' ಇದಕ್ಕೆ ಸಂಬಂಧಿಸಿದ 58 ಎಕರೆ ಭೂಮಿಯಲ್ಲಿ 8 ಎಕರೆ ಮಾತ್ರ ಉಳಿದಿದ್ದು ಬಾಕಿ ಒತ್ತುವರಿ ಆಗಿರುತ್ತದೆ ಎಂದು ತಿಳಿಸಿರುತ್ತಾರೆ.

ಆದರೆ, ಆ ವರದಿಯಲ್ಲಿ ಪಿ.ಜೆ. ಬಡಾವಣೆಗೆ ಸಂಬಂಧಿಸಿದಂತೆ ಪ್ರಸ್ತಾಪವೇ ಇರುವುದಿಲ್ಲ ಎಂದಾಗ, 2012 ರಲ್ಲಿ ಅನ್ವರ್ ಮಾನಪ್ಪಾಡಿ ವರದಿ ಹಿನ್ನೆಲೆಯಲ್ಲಿ ಅಂದಿನ ಮುಖ್ಯಮಂತ್ರಿ ಡಿ.ವಿ ಸದಾನಂದ ಗೌಡರು ಪಿ.ಜೆ ಬಡಾವಣೆಗೆ ಸಂಬಂಧಪಟ್ಟಂತೆ ಸೂಚನೆ ನೀಡಿದ್ದರು ಎಂಬುದು ಹಸಿ ಸುಳ್ಳು.

2015 ರಲ್ಲಿ ಪಹಣಿಯಲ್ಲಿ ಮ್ಯುಟೇಷನ್ ಆಗಿದೆ, ಕೋರ್ಟ್ ಆದೇಶದ ಆಧಾರದಲ್ಲಿ ತಹಶೀಲ್ದಾರ್ ಮ್ಯುಟೇಷನ್ ಮಾಡಿದ್ದಾರೆ ಎಂಬ ಉಲ್ಲೇಖವಿದೆ ಹೀಗಿದ್ದೂ, ಪತ್ರಿಕಾ ಹೇಳಿಕೆಯಲ್ಲಿ ಸುಳ್ಳು ಆರೋಪ ಮಾಡುವುದು ಶೋಭೆಯಲ್ಲ. ವರದಿ ಕುರಿತು ಮಾಹಿತಿ ಇದ್ದಲ್ಲಿ ದಾಖಲಾತಿ ಪ್ರಕಟಿಸಿ ಎಂದು ಕಾಂಗ್ರೆಸ್ ಮುಖಂಡರನ್ನು ಪ್ರಸನ್ನಕುಮಾರ್ ಆಗ್ರಹಿಸಿದ್ದಾರೆ.

27 ಸಾವಿರ ಎಕರೆ ಪರಭಾರೆ ಮಾಡಿಕೊಂಡಿರುವ ಆಸ್ತಿಯನ್ನು ಅನೇಕ ಮುಖಂಡರು ಅಕ್ರಮವಾಗಿ ಅನುಭವಿಸುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕುವ ಬದಲು ಪ್ರಚಾರಕ್ಕಾಗಿ ಹೇಳಿಕೆ ನೀಡಬಾರದು.

ಅವರ ಮೇಲೆ ಕ್ರಮ ಕೈಗೊಂಡು ವಕ್ಫ್ ಆಸ್ತಿ ವಾಪಸ್ ಪಡೆಯುವುದಾಗಿ ಅಂದಿನ ಮುಖ್ಯಮಂತ್ರಿಗಳು ಹಾಗೂ ನಂತರ ಬಸವರಾಜ ಬೊಮ್ಮಾಯಿ ತಿಳಿಸಿರುತ್ತಾರೆ. ಇದನ್ನು ಕಾಂಗ್ರೆಸ್ ಪಕ್ಷ ತಿರುಚಿ ಹೇಳುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

## ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ದಾವಣಗೆರೆ, ನ. 26 - ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ, ಅರೆ ಅಲೆಮಾರಿ ಪ್ರವರ್ಗ-1 ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಶುಲ್ಕ ವಿನಾಯಿತಿ, ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ನವೆಂಬರ್ 30 ರವರೆಗೆ ವಿಸ್ತರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

# ನಗರ ಪಾಲಿಕೆಯಿಂದ ಇಂದಿನಿಂದ ಕರ್ನಾಟಕ ರಾಜ್ಯೋತ್ಸವ



ದಾವಣಗೆರೆ, ನ.26- ಇಲ್ಲಿನ ಮಹಾ ನಗರಪಾಲಿಕೆ ಆವರಣದ ರಾಧಮ್ಮ ಚನ್ನಗಿರಿ ರಂಗಪ್ಪ ಸ್ಮಾರಕ ರಂಗಮಂದಿರದಲ್ಲಿ ನಾಳೆ ದಿನಾಂಕ 27ರ ಬುಧವಾರದಿಂದ ಇದೇ ದಿನಾಂಕ 30ರ ವರೆಗೆ '69ನೇ ಕನ್ನಡ ರಾಜ್ಯೋತ್ಸವ' ಪ್ರಯುಕ್ತ ವಿವಿಧ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಪಾಲಿಕೆಯ ಮೇಯರ್ ಕೆ. ಚಮನ್‌ಸಾಬ್ ತಿಳಿಸಿದರು.

ಪಾಲಿಕೆಯ ಮೇಯರ್ ಕೊಠಡಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾನಗರ ಪಾಲಿಕೆ, ಕನ್ನಡ ಪರ ಸಂಘ-ಸಂಸ್ಥೆಗಳು ಮತ್ತು ಪತ್ರಕರ್ತರ ಸಂಯುಕ್ತಾಶ್ರಯದಲ್ಲಿ ಈ ಬಾರಿ ರಾಜ್ಯೋತ್ಸವವನ್ನು ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಹೇಳಿದರು.

ನಾಳೆ ಬುಧವಾರ ಸಂಜೆ 5ಕ್ಕೆ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ 125ಕ್ಕೆ 125 ಹಾಗೂ 100ಕ್ಕೆ 100 ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮ ನಡೆಯಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಅವರು ಜಿಲ್ಲೆಯ 300 ವಿದ್ಯಾರ್ಥಿಗಳನ್ನು ಅಭಿನಂದಿಸಲಿದ್ದಾರೆ. ಈ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನೂ ನೀಡಲಿದ್ದೇವೆ ಎಂದರು.

ಈ ದಿನವೇ ದಿ. ಕಂಚಿಕೇರಿ ಶಿವಣ್ಣನವರ ಶ್ರೀ ಜಯಲಕ್ಷ್ಮಿ ನಾಟಕ ಸಂಘದಿಂದ 'ಕನ್ನಡ ನಾಟಕೋತ್ಸವ' ಜರುಗಲಿದ್ದು, ಮಧ್ಯಾಹ್ನ 3ರಿಂದ 'ಮುದುಕನ ಮದುವೆ, ಕಳ್ಳ ಗುರು ಸುಳ್ಳ ಶಿಷ್ಯ ಹಾಗೂ ಕಿವುಡ ಮಾಡಿದ ಕಿತಾಪತಿ ಎಂಬ ಮೂರು ನಾಟಕಗಳ ಪ್ರದರ್ಶನ ಪ್ರಾರಂಭವಾಗಲಿದೆ ಎಂದು ತಿಳಿಸಿದರು.

**ನವೆಂಬರ್ 28 :** ಅಂದು ಬೆಳಗ್ಗೆ 9.30ಕ್ಕೆ ಪಾಲಿಕೆ ಆವರಣದಲ್ಲಿ ಮೇಯರ್ ಚಮನ್ ಸಾಬ್ ಕನ್ನಡ ಧ್ವಜಾರೋಹಣ ನೆರವೇರಿಸುವರು. ತದನಂತರ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಹಿರಿಯ ಸಾಹಿತಿ ಕುಂ. ವೀರಭದ್ರಪ್ಪ ಭುವನೇಶ್ವರಿ ದೇವಿಯ ಭವ್ಯ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ.

ಪಾಲಿಕೆ ಆಯುಕ್ತರಾದ ರೇಣುಕಾ, ಉಪಮೇಯರ್ ಸೋಗಿ ಶಾಂತಕುಮಾರ್, ಸಮರ್ಥ ಶಾಮನೂರು, ವಿಶ್ವಪರ್ಯಟನಾಗಾರ ಮಹಮ್ಮದ್ ಸಿನಾನ್ ಸೇರಿದಂತೆ ಗಣ್ಯರು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ.

ಅಂದು ಸಂಜೆ 5.30ಕ್ಕೆ ರಾಜ್ಯೋತ್ಸವ ಸಮಾರಂಭ ನಡೆಯಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟಿಸುವರು. ಹೆಬ್ಬಾಳು ವಿರಕ್ತ ಮಠದ ಮಹಾಂತ ರುದ್ರೇಶ್ವರ ಶ್ರೀಗಳು, ಇಸ್ಲಾಂ ಗುರುಗಳಾದ ಜೈನೀ ಕಾಮೀಲ್ ಸಖಾಫಿ ಮತ್ತು ಕ್ರೈಸ್ತ ಧರ್ಮದ ಗುರುಗಳಾದ ಆಂಟೋನಿ ನಜರತ್ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ಹಿರಿಯ ಸಾಹಿತಿ ಕುಂ. ವೀರಭದ್ರಪ್ಪ ಉಪನ್ಯಾಸ ನೀಡಲಿದ್ದು, ಶಾಸಕ ಕೆ.ಎಸ್. ಬಸವಂತಪ್ಪ, ಸೋಗಿ ಶಾಂತಕುಮಾರ್, ಸುರೇಶ್ ಬಿ. ಇಟ್ನಾಳ್ ಸೇರಿದಂತೆ ಗಣ್ಯರು ಭಾಗವಹಿಸುವರು.

ರಾತ್ರಿ 8ಕ್ಕೆ ಹಾಸ್ಯ ನಟ ಸಾಧು ಕೋಕಿಲ ಮತ್ತು ಗಿಚ್ಚಿಗಿಲಿಗಿಲಿ ತಂಡದ ಗೊಬ್ರಗಾಲ ಮಂಜು ಅವರಿಂದ ಮನರಂಜನೆ ಕಾರ್ಯಕ್ರಮ ನಡೆಯಲಿದೆ.

**ನವೆಂಬರ್ 29 :** ಅಂದು ಸಂಜೆ 5.30ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದು, ವಿಧಾನ ಪರಿಷತ್ ಸದಸ್ಯ ಕೆ. ಅಬ್ದುಲ್ ಜಬ್ಬಾರ್ ಸಾಬ್ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಲಿದ್ದಾರೆ.

ಹಿರಿಯ ಸಾಹಿತಿ ಬಿ.ಆರ್.ಲಕ್ಷ್ಮಣರಾವ್ ಉಪನ್ಯಾಸ ನೀಡುವರು. ಅತಿಥಿಗಳಾಗಿ ಎಸ್ಪಿ ಉಮಾಪ್ರಶಾಂತ್, ಪತ್ರಕರ್ತರಾದ ಬಸವರಾಜ ದೊಡ್ಮನಿ, ತೇಜಸ್ವಿನಿ, ಕನ್ನಡ ಪರ ಸಂಘಟನೆಯ ಎಂ.ಎಸ್. ರಾಮೇಗೌಡ, ಜಮ್ನಳ್ಳಿ ನಾಗರಾಜ, ಶಾಂತಮ್ಮ ಇತರರು ಭಾಗವಹಿಸುವರು.


ಇದಕ್ಕೂ ಮುನ್ನ ಸಂಜೆ 4.30ರಿಂದ ಜಾಂಬೆ ಬಾಲು ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಜಾಂಬೆ ಜಲಕ್ ಜಾನಪದ ಕಾರ್ಯಕ್ರಮ ಜರುಗುವುದು. ರಾತ್ರಿ 8.30ರಿಂದ ಸಂಗೀತ ಕಟ್ಟಿ ಅವರ ತಂಡದಿಂದ ಕರ್ನಾಟಕ ಗೀತ ವೈಭವ ಮತ್ತು ಜ್ಯೂನಿಯರ್ ವಿಷ್ಣುವರ್ಧನ್ ಅವರಿಂದ ಮಿಮಿಕ್ರಿ ಕಾರ್ಯಕ್ರಮ ನಡೆಯಲಿದೆ.

**ನವೆಂಬರ್ 30 :** ಅಂದು ಸಂಜೆ 5.30ರ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ, ದಾನಿಗಳಾದ ಚನ್ನಗಿರಿ ವಿರುಪಾಕ್ಷಪ್ಪ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ, ಡಾ.ಎಂ. ಎಸ್. ಎಲಿ, ರೈತ ಹೋರಾಟಗಾರ ನರಸಿಂಹಪ್ಪ, ನಿವೃತ್ತ ಮುಖ್ಯ ಶಿಕ್ಷಕ ಕೆ.ಇಮಾಂ ಅವರುಗಳಿಗೆ 'ನಾಗರಿಕ ಪೌರ ಸನ್ಮಾನ' ನಡೆಯಲಿದೆ.

ಹಿರಿಯ ಸಾಹಿತಿ ರಂಜಾನ ದರ್ಗಾ ಅವರು ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಶಾಸಕ ಶಿವಗಂಗಾ ಬಸವರಾಜ, ಮಾಜಿ ಸಚಿವ ಎಚ್.ಆಂಜನೇಯ, ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ, ನಟ ಡಾಲಿ ಧನಂಜಯ, ಕಾನಿಪ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ, ಹಿರಿಯ ಪತ್ರಕರ್ತ ಬಿ.ಎನ್.ಮಲ್ಲೇಶ್, ಕನ್ನಡ ಪರ ಸಂಘಟನೆಗಳ ಟಿ. ಶಿವಕುಮಾರ್, ಕೆ.ಜಿ. ಶಿವಕುಮಾರ್, ಜಿ. ಮಂಜುಳಾ ಭಾಗವಹಿಸುವರು.

ಸುದ್ದಿಗೋಷ್ಠಿಯಲ್ಲಿ ಉಪಮೇಯರ್ ಸೋಗಿ ಶಾಂತಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷೆ ಸವಿತಾ ಗಣೇಶ ಹುಲ್ಲುಮನೆ, ಡಿ.ಎಸ್. ಆಶಾ, ಸುಧಾ ಮಂಜುನಾಥ ಇಟ್ಟಿಗುಡಿ, ಪಾಲಿಕೆ ಸದಸ್ಯ ಎ. ನಾಗರಾಜ್, ಗಡಿಗುಡಾಳ ಮಂಜುನಾಥ ಹಾಗೂ ಇತರರು ಇದ್ದರು.

## ನಗರದಲ್ಲಿ ನಾಳೆ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಕಾರ್ತಿಕೋತ್ಸವ



ದಾವಣಗೆರೆ, ನ. 26 - ನಗರದ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ನಾಡಿದ್ದು ದಿನಾಂಕ 28 ರ ಗುರುವಾರ ಸಂಜೆ 6 ಗಂಟೆಗೆ ಕಾರ್ತಿಕೋತ್ಸವ ನಡೆಯಲಿದೆ.

ಅಂದು ಬೆಳಿಗ್ಗೆ 6ಕ್ಕೆ ಕಾಕಡಾರತಿ ಮತ್ತು 8ಕ್ಕೆ ಆರತಿ, 9ಕ್ಕೆ ಧನಿಪೂಜೆ, ಮಧ್ಯಾಹ್ನ 12ಕ್ಕೆ ಆರತಿ ಮತ್ತು ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಕಾರ್ತಿಕೋತ್ಸವ, 6.30ರ ದೂಪ ಆರತಿ ನಂತರ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ಶ್ರೀ ಸಾಯಿ ಟ್ರಸ್ಟ್ ಕಾರ್ಯದರ್ಶಿ ಎಂ. ಶಿವಪ್ಪ ತಿಳಿಸಿದ್ದಾರೆ.

## ಕನಕ ಜಯಂತ್ಯೋತ್ಸವ ಮುಂದೂಡಿಕೆ

ದಾವಣಗೆರೆ, ನ.26- ಜಿಲ್ಲಾ ಕುರುಬ ಸಮಾಜದ ವತಿಯಿಂದ ಬರುವ 2025ರ ಜನವರಿ ತಿಂಗಳ ಮೊದಲ ವಾರದಲ್ಲಿ ಕನಕದಾಸರ 537ನೇ ಜಯಂತ್ಯುತ್ಸವವನ್ನು ಸಿ.ಎಂ ಸಿದ್ದರಾಮಯ್ಯನವರ ಸಮ್ಮುಖದಲ್ಲಿ ಆಚರಿಸಲು ತೀರ್ಮಾನಿಸಲಾಗಿದೆ ಎಂದು ಕುರುಬ ಸಮಾಜದ ಮುಖಂಡ ಎಸ್.ಎಲ್.ಆನಂದಪ್ಪ ತಿಳಿಸಿದರು.

ನಗರದ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನವೆಂಬರ್ ತಿಂಗಳಲ್ಲಿ ನಡೆಯಬೇಕಿದ್ದ ಕನಕದಾಸರ ಜಯಂತಿಯನ್ನು ಮುಂದೂಡಲಾಗಿದೆ ಎಂದು ಹೇಳಿದರು.

ಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ, ಇಟ್ಟಿಗುಡಿ ಮಂಜುನಾಥ, ಎಸ್.ಟಿ. ಅರವಿಂದ, ಮಲ್ಲಿಕಾರ್ಜುನ್, ಸುಧಾ, ಆಶಾ, ಜಯಪ್ಪ, ಲೋಕಪ್ಪ, ಹೊನ್ನಪ್ಪ, ಪ್ರಕಾಶ್, ಧರ್ಮಣ್ಣ, ಶಿವಣ್ಣ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

## ಬೀದಿಬದಿ ವ್ಯಾಪಾರಸ್ಥರ ಪಖ್ವಾಡ ಶಿಬಿರ

ದಾವಣಗೆರೆ, ನ.26- ಬೀದಿಬದಿ ವ್ಯಾಪಾರಸ್ಥರ ಸರ್ವತೋಮುಖ ಅಭ್ಯುದಯಕ್ಕಾಗಿ ಕೇಂದ್ರ ಪುರಸ್ಕೃತ ಪಿಎಂ-ನಿಧಿ ಈ ಯೋಜನೆಯ ವೇಗವನ್ನು ಹೆಚ್ಚಿಸಲು ನವೆಂಬರ್ 18 ರಿಂದ ಡಿಸೆಂಬರ್ 2ರವರೆಗೆ ಪಖ್ವಾಡ ಶಿಬಿರಗಳನ್ನು ವಿವಿಧ ಬ್ಯಾಂಕುಗಳ ಶಾಖೆಗಳಲ್ಲಿ ಆಯೋಜಿಸಲಾಗಿದೆ.

ಆಸಕ್ತ ಬೀದಿಬದಿ ವ್ಯಾಪಾರಸ್ಥರು ಕಿರು ಸಾಲ ಸೌಲಭ್ಯ ಒದಗಿಸಲು ಅರ್ಜಿ ಸಲ್ಲಿಸಬಹುದು. ಸಾಲ ಮಂಜೂರಾತಿ ಪಡೆಯುವುದು, ಸಾಲ ವಿತರಣೆ ಪಡೆಯುವುದು, ಡಿಜಿಟಲ್ ವಹಿವಾಟು ಪಾವತಿ ನಡೆಸುವುದು ಮತ್ತು ಸಾಮಾಜಿಕ ಭದ್ರತಾ ವಿಮಾ ಯೋಜನೆಗಳ ಅನುಕೂಲ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಆಯಾ ನಗರ ಸ್ಥಳೀಯ ಸಂಸ್ಥೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು.

## ಮಾಜಿ ಸೈನಿಕರ ಮಕ್ಕಳಿಗೆ ಶಿಷ್ಯವೇತನ, ಆರ್ಥಿಕ ಅನುದಾನಕ್ಕಾಗಿ ಅರ್ಜಿ

ದಾವಣಗೆರೆ, ನ.26- ಕೇಂದ್ರೀಯ ಸೈನಿಕ ಮಂಡಳಿಯು ಭಾರತೀಯ ಸೇನೆಯ ಜೆ.ಸಿ.ಓ ರ್‍ಯಾಂಕ್ ವರೆಗಿನ ಅಥವಾ ವಾಯು ಸೇನೆ, ನೌಕಾ ಸೇನೆಯ ತತ್ಸಮಾನ ರ್‍ಯಾಂಕ್ ವರೆಗಿನ ಮಾಜಿ ಸೈನಿಕರ ಮಕ್ಕಳು, ದ್ವಿತೀಯ ಪಿಯುಸಿಯಲ್ಲಿ ಶೇ.60ಕ್ಕಿಂತ ಅಧಿಕ ಅಂಕ ಪಡೆದು, ಇಂಜಿನಿಯರಿಂಗ್, ಮೆಡಿಕಲ್ ಮತ್ತು ಇತರೆ ವೃತ್ತಿಪರ ಶಿಕ್ಷಣದಲ್ಲಿ ಪದವಿ ವ್ಯಾಸಂಗಕ್ಕಾಗಿ 2024-25ನೇ ಸಾಲಿನಲ್ಲಿ ಪ್ರವೇಶಾತಿ ಪಡೆದು ಪ್ರಥಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಪ್ರಧಾನ ಮಂತ್ರಿ ಶಿಷ್ಯ ವೇತನ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಇದೇ ದಿನಾಂಕ 30ರೊಳಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಮಾಹಿತಿಗಾಗಿ 08182-220925 ಸಂಪರ್ಕಿಸಿ ಅಥವಾ ಕೇಂದ್ರೀಯ ಸೈನಿಕ ಮಂಡಳಿಯ ಜಾಲತಾಣ HTTPS://ONLINE.KSB.GOV.IN ವೀಕ್ಷಿಸಲು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕ ಡಾ.ಸಿ.ಎ. ಹಿರೇಮಠ ತಿಳಿಸಿದ್ದಾರೆ.

# ನಗರದಲ್ಲಿ ನಾಳೆ 'ಮಹಲಿಂಗರಂಗ ಸಾಹಿತ್ಯ ಪ್ರಶಸ್ತಿ' ಪ್ರದಾನ ಸಮಾರಂಭ

**ಶ್ರೀಮತಿ ಗೌರಮ್ಮ ಪಿ ಮೋತಿ ರಾಮರಾವ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕಾರ್ಯಕ್ರಮ**

ದಾವಣಗೆರೆ, ನ. 26- ಶ್ರೀಮತಿ ಗೌರಮ್ಮ ಪಿ ಮೋತಿ ರಾಮರಾವ್ ಚಾರಿಟಬಲ್ ಟ್ರಸ್ಟ್ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿಸಿರುವ 2024ನೇ ಸಾಲಿನ 'ಮಹಲಿಂಗರಂಗ ಸಾಹಿತ್ಯ ಪ್ರಶಸ್ತಿ', 'ಗ್ರಾಮೀಣ ಸಿರಿ' ಮತ್ತು 'ನಗರ ಸಿರಿ' ಪ್ರಶಸ್ತಿ ಪ್ರದಾನ ಹಾಗೂ 13ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ನವೀಕೃತ ಸ್ಮರಣ ಸಂಚಿಕೆ 'ಸಂಗಮ ಸಿರಿ' ಲೋಕಾರ್ಪಣೆ ಸಮಾರಂಭವು ಕುವೆಂಪು ಕನ್ನಡ ಭವನದಲ್ಲಿ ನಾಡಿದ್ದು ದಿನಾಂಕ 28 ರ ಗುರುವಾರ ಬೆಳಿಗ್ಗೆ 11 ಘಂಟೆಗೆ ನಡೆಯಲಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ಬಿ.ವಾಮದೇವಪ್ಪ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಮಹಲಿಂಗರಂಗ ಸಾಹಿತ್ಯ ಪ್ರಶಸ್ತಿಗೆ ಸಾಹಿತಿ ಮಲ್ಲಿಕಾರ್ಜುನ ಕಡಕೋಳ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಿರಿಯ ಸಾಹಿತಿ ಹಾಗೂ ಚಿಂತಕ ಕುಂ.ವೀರಭದ್ರಪ್ಪ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದರು.

ಶ್ರೀಮತಿ ಗೌರಮ್ಮ ಮೋತಿ ಪಿ. ರಾಮರಾವ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮೋತಿ ಆರ್. ಪರಮೇಶ್ವರ ರಾವ್ ಮುಖ್ಯ ಅತಿಥಿಯಾಗಿ ಆಗಮಿಸುವರು. ಪ್ರಶಸ್ತಿ ಪುರಸ್ಕೃತರ ಬಗ್ಗೆ ಹಿರಿಯ ರಂಗಕರ್ಮಿ ಬಾ.ಮ.ಬಸವರಾಜಯ್ಯ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಪ್ರೊ. ಭಿಕ್ಷಾವರ್ತಿಮಠ ಹೆಚ್.ಎ., ಎನ್.ಟಿ. ಎರ್ರಿಸ್ವಾಮಿ ಹಾಗೂ ಪ್ರೊ.ಸಿ.ವಿ.ಪಾಟೀಲ ಸಮಾರಂಭದಲ್ಲಿ ಉಪಸ್ಥಿತರಿರುವರು.

ಇದೇ ಸಮಾರಂಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ದಾವಣಗೆರೆ ನಗರ ಮಟ್ಟದಲ್ಲಿ ಕನ್ನಡ ನಾಡು ನುಡಿಗಾಗಿ ಸೇವೆ ಸಲ್ಲಿಸುತ್ತಿರುವ ಸಾಧಕರಿಗೆ ನೀಡಲಾಗುವ 2024 ರ ಸಾಲಿನ 'ಗ್ರಾಮೀಣ ಸಿರಿ' ಮತ್ತು 'ನಗರ ಸಿರಿ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತದೆ.

ಈ ಬಾರಿ 'ಗ್ರಾಮೀಣ ಸಿರಿ' ಪ್ರಶಸ್ತಿಗೆ ದಾವಣಗೆರೆ ತಾಲ್ಲೂಕಿನಿಂದ ಬಿ.ಕೆ. ಜಯಪ್ರಕಾಶ್, ಅಗಸನಕಟ್ಟೆ, ಜಿ.ಸಿ. ಮಂಗಳ, ಹಿರೇತೊಗಲೇರಿ, ಹರಿಹರ ತಾಲ್ಲೂಕಿನ ಕೆ.ಪಂಚಾಕ್ಷರಿ, ಕಮಲಾಪುರ, ಕೆ. ಟಿ.ಗೀತಾ ಕೊಂಡಜ್ಜಿ, ಚನ್ನಗಿರಿ ತಾಲ್ಲೂಕಿನ ಹೊದಿಗೆರೆ ಪ್ರಭಾಕರ್, ಸುನೀತ ರಾಜು, ಸಂತೆಬೆನ್ನೂರು, ಜಗಳೂರು ತಾಲ್ಲೂಕಿನ ನಾಗೇಶ ಶಾಸ್ತ್ರಿಗಳು ಬಸವನಕೋಟೆ ಮತ್ತು ಕಾಟಮ್ಮ ತೋರಣಗಟ್ಟೆ, ಹೊನ್ನಾಳಿ ತಾಲ್ಲೂಕಿನ ಬಿ.ಚಂದ್ರಶೇಖರಾಚಾರಿ ಕೂಲಂಬಿ ಮತ್ತು ಎ.ಸಿ.ಚಂದ್ರಕಲಾ, ಕತ್ತಿಗೆ, ನ್ಯಾಮತಿ ತಾಲ್ಲೂಕಿನ ಪುರವಂತರ ಪರಮೇಶ್ವರಪ್ಪ ಚೀಲೂರು ಮತ್ತು ಸಿದ್ದಮ್ಮ ಭುವನೇಶ್ವರಪ್ಪ ಮಲ್ಲಿಗೇನಹಳ್ಳಿ ಭಾಜನರಾಗಿದ್ದಾರೆ. ಹಾಗೆಯೇ 'ನಗರ ಸಿರಿ' ಪ್ರಶಸ್ತಿಗೆ ಬಸಾಪುರದ ಬಸವ ಕಲಾ ಲೋಕದ ಸಂಗೀತ ಕಲಾವಿದ ಶಶಿಧರ ಹೆಚ್. ಹಾಗೂ ಶರಧಿ ಕಲಾ ಸಾಂಸ್ಕೃತಿಕ ಸಂಸ್ಥೆಯ ಸಂಗೀತ ಶಿಕ್ಷಕಿ, ವಿದುಷಿ ಶೋಭಾ ರಂಗನಾಥ್ ಭಾಜನರಾಗಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಕಸಾಪ ಗೌರವ ಕೋಶಾಧ್ಯಕ್ಷ ಕೆ.ರಾಘವೇಂದ್ರ ನಾಯರಿ, ಗೌರವ ಕಾರ್ಯದರ್ಶಿ ಬಿ.ದಿಳ್ಯೆಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾದ ರುದ್ರಾಕ್ಷಿಬಾಯಿ, ಎನ್.ಎಸ್. ರಾಜು, ಎಸ್.ಎಂ. ಮಲ್ಲಮ್ಮ ಉಪಸ್ಥಿತರಿದ್ದರು.

## ಸಹಕಾರಿ ರಾಜ್ಯಾಧ್ಯಕ್ಷರಾಗಿ ಪ್ರಭುದೇವ್ ಆರ್.ಮಾಗನೂರು



ದಾವಣಗೆರೆ, ನ.26- ನಗರದಲ್ಲಿ ಮೊನ್ನೆ ನಡೆದ ಸಹಕಾರ ಭಾರತೀಯ ರಾಜ್ಯ ಸಹಕಾರಿ ಸಮಾವೇಶದಲ್ಲಿ ಪ್ರಭುದೇವ್ ಆರ್. ಮಾಗನೂರು ಅವರನ್ನು ಸಹಕಾರಿ ರಾಜ್ಯಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ನಿಕಟಪೂರ್ವ ರಾಜ್ಯಾಧ್ಯಕ್ಷ ರಾಜಶೇಖರ್ ಶೀಲವಂತ್ ಅವರು ಪ್ರಭುದೇವ್ ಆರ್. ಮಾಗನೂರು ಅವರಿಗೆ ಬಾವುಟ ನೀಡುವುದರ ಮೂಲಕ ಅಧಿಕಾರ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ ಮಹೇಂದ್ರನಾಯ್ಕ್, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂಜಯ್ ಪಾಚಪೂರ್, ಡಿಸಿಸಿ ಬ್ಯಾಂಕ್‌ನ ರಾಯಚೂರು ಜಿಲ್ಲೆಯ ಅಧ್ಯಕ್ಷ ಮಹೇಶ್ ಪಾಟೀಲ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ನಿರ್ದೇಶಕ ಜಿ.ಎನ್.ಪಾಟೀಲ್, ಪ್ರಧಾನ ಕಾರ್ಯದರ್ಶಿ ನರಸಿಂಹ ಕಾಮತ್ ಸೇರಿದಂತೆ ಜಿಲ್ಲೆಯ ಎಲ್ಲಾ ಸಹಕಾರಿ ಸದಸ್ಯರು, ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಸಾರಥಿ ಗ್ರಾಪಂಗೆ ರವೀಂದ್ರ ಪಾಟೀಲ್ ಉಕ್ಕಡಗಾತ್ರಿಗೆ ಚಂದ್ರಗೌಡ ಆಯ್ಕೆ



ಹರಿಹರ, ನ.26- ಕಳೆದ ವಾರ ನಡೆದ ತಾಲ್ಲೂಕಿನ ಸಾರಥಿ ಮತ್ತು ಉಕ್ಕಡಗಾತ್ರಿ ಗ್ರಾಮ ಪಂಚಾಯತಿ ಉಪ ಚುನಾವಣೆಯ ಮತಗಳ ಎಣಿಕೆ ಇಂದು ತಹಶೀಲ್ದಾರ್ ಕಚೇರಿಯಲ್ಲಿ ನಡೆಯಿತು.

ಸಾರಥಿ ಗ್ರಾಮದಲ್ಲಿ ನಡೆದ ಉಪ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ರವೀಂದ್ರ ಪಾಟೀಲ್ 400 ಮತಗಳನ್ನು ಪಡೆದು ವಿಜೇತರಾದರು. ಪ್ರತಿಸ್ಪರ್ಧಿ ಬಸವಂತಪ್ಪ ಬಿ.ಹೆಚ್. 319 ಮತಗಳನ್ನು ಪಡೆದು ಪರಾಭವಗೊಂಡರು.

ಉಕ್ಕಡಗಾತ್ರಿ ಗ್ರಾಮದಲ್ಲಿ ನಡೆದ ಇನ್ನೊಂದು ಉಪ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಚಂದ್ರಗೌಡ ಜಿಗಳೇರ 342 ಮತಗಳನ್ನು ಪಡೆದು ಪ್ರತಿಸ್ಪರ್ಧಿ ಕವಿತಾ ಭರಮಗೌಡ ಶಿವಪೂಜೆ (269) ಅವರನ್ನು ಪರಾಭವಗೊಳಿಸಿದರು.

ತಾಲ್ಲೂಕಿನ ವಾಸನ ಗ್ರಾಮ ಪಂಚಾಯತಿಯ ಹಿಂಡಸಗಟ್ಟ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಿ.ಸಿ.ಎಂ. 'ಎ' ಮಹಿಳಾ ಸ್ಥಾನದಿಂದ ಶ್ರೀಮತಿ ಮಂಜುಳಾ ರವರು ಅವಿರೋಧವಾಗಿ ಆಯ್ಕೆ ಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ತಿಳಿಸಿದರು.

ಈ ಸಂದರ್ಭದಲ್ಲಿ ಚುನಾವಣೆ ಶಿರಸ್ತೇದಾರ್ ಜಿ.ಪಿ. ಅಶೋಕ ಕುಮಾರ್, ಚುನಾವಣೆ ಶಾಖೆ ಸಹಾಯಕರಾದ ಎಂ. ಸೋಮಶೇಖರ್, ಪಿ.ಬಿ. ಉಮೇಶ್, ಮಲೇಬೆನ್ನೂರು ರವಿಕುಮಾರ್, ಚುನಾವಣಾ ಅಧಿಕಾರಿಗಳಾದ ಸುರೇಶ್, ಮಂಜುನಾಥಯ್ಯ ಇತರರು ಹಾಜರಿದ್ದರು.

## ದಕ್ಷಿಣ ಭಾರತ ಪವರ್ ಲಿಫ್ಟಿಂಗ್ ಸ್ಪರ್ಧೆ ಡಿ. ಸುಜಿಲ್ ಅಹಮದ್‌ಗೆ ಚಿನ್ನ



ದಾವಣಗೆರೆ, ನ. 26- ತಮಿಳುನಾಡಿನ ಸೇಲಂನಲ್ಲಿ ಕಳೆದ ವಾರ ನಡೆದ ದಕ್ಷಿಣ ಭಾರತ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ನಗರದ ಕಾರ್ಪೊರೇಷನ್ ವ್ಯಾಯಾಮ ಶಾಲೆಯ ಕ್ರೀಡಾಪಟು ಡಿ. ಸುಜಿಲ್ ಅಹಮದ್ ಅವರು ಸಬ್ ಜ್ಯೂನಿಯರ್ ವಿಭಾಗದಲ್ಲಿ ಸ್ಪರ್ಧಿಸಿ ಡೆಡ್‌ಲಿಫ್ಟ್ ನಲ್ಲಿ 252.5 ಕೆಜಿ ತೂಕ ಎತ್ತುವುದರ ಮೂಲಕ ನೂತನ ರಾಷ್ಟ್ರೀಯ ದಾಖಲೆ ಮಾಡಿದ್ದಾರೆ. ಒಟ್ಟಾರೆ 637.5 ಕೆ.ಜಿ. ಎತ್ತುವ ಮೂಲಕ ಚಿನ್ನದ ಪದಕ ಪಡೆದಿರುತ್ತಾರೆ.

ಸುಜಿಲ್ ಅಹಮದ್, ಅಂತರರಾಷ್ಟ್ರೀಯ ಪವರ್ ಲಿಫ್ಟರ್ ಹೆಚ್.ದಾದಾಪೀರ್ ಹಾಗೂ ಅಂತರರಾಷ್ಟ್ರೀಯ ಕ್ರೀಡಾಪಟುಗಳು ಮತ್ತು ಮಹಿಳಾ ಪೊಲೀಸ್ ಅಧಿಕಾರಿ ಶ್ರೀಮತಿ ಕೆ.ಎನ್. ಶೈಲಜಾ ದಂಪತಿ ಪುತ್ರ.

ಸುಜಿಲ್ ಅಹಮದ್ ಅವರನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಪೊಲೀಸ್ ರಕ್ಷಣಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್, ಡಿಎಆರ್ ಡಿವೈಎಸ್ಪಿ ಪಿ.ಬಿ. ಪ್ರಕಾಶ್ ಹಾಗೂ ವ್ಯಾಯಾಮ ಶಾಲೆಯ ತರಬೇತಿದಾರ ಎನ್.ಹನುಮಂತ ಮತ್ತು ಇತರರು ಅಭಿನಂದಿಸಿದ್ದಾರೆ.

## ಚನ್ನಗಿರಿ ತಾಲ್ಲೂಕಿನ ಎಸ್ಸಿ, ಎಸ್ಟಿ ರೈತರಿಂದ ಅರ್ಜಿ ಆಹ್ವಾನ

ಚನ್ನಗಿರಿ, ನ.26- ತಾಲ್ಲೂಕಿನ ತೋಟಗಾರಿಕೆ ಇಲಾಖೆಯಿಂದ 2025-26ನೇ ಸಾಲಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯೋಜನೆಯಡಿ ಹೊಸದಾಗಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ರೈತರು ಇದೇ ದಿನಾಂಕ 30 ರೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಚನ್ನಗಿರಿ ಕಚೇರಿಗೆ ಅಥವಾ ಆಯಾ ಗ್ರಾಮ ಪಂಚಾಯತಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಹೋಬಳಿ ಮಟ್ಟದ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದು.

## ಸಂವಿಧಾನದ ತಿಳುವಳಿಕೆ ಪ್ರತಿಯೊಬ್ಬರಿಗೂ ಅತ್ಯವಶ್ಯಕ



**ಆರ್.ಎಲ್. ಲಾ ಕಾಲೇಜಿನಲ್ಲಿನ ಸಂವಿಧಾನ ದಿನಾಚರಣೆಯಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್. ಬಿಲ್ಲಪ್ಪ ಅಭಿಮತ**


ದಾವಣಗೆರೆ, ನ.26- ಸಂವಿಧಾನವು ಅವಶ್ಯಕವಾದ ಧರ್ಮಗ್ರಂಥ ಮತ್ತು ಮೂಲ ಆಕರ ಗ್ರಂಥವಾಗಿದೆ. ಸಂವಿಧಾನ ನಾಗರಿಕನ ಮೂಲಭೂತ ಹಕ್ಕುಗಳನ್ನು ರಕ್ಷಿಸುವಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ. ಸಂವಿಧಾನವಿಲ್ಲದೇ ಮನುಷ್ಯ ಜೀವನವನ್ನು ಊಹಿಸಿಕೊಳ್ಳಲು ಕಷ್ಟವಾಗುತ್ತದೆ. ಇಂತಹ ಅತ್ಯಮೂಲ್ಯ ಮೌಲ್ಯಗಳನ್ನು ಒಳಗೊಂಡ ಸಂವಿಧಾನದ ಬಗ್ಗೆ ತಿಳಿದುಕೊಳ್ಳುವುದು ಹಾಗೂ ಗೌರವಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂದು ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಹೆಚ್. ಬಿಲ್ಲಪ್ಪ ಹೇಳಿದರು.

ನಗರದ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಇಂದು ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎಂ. ಹೆಗಡೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಅವರುಗಳು ಆಗಮಿಸಿದ್ದರು.

ಪ್ರೊ. ವಿದ್ಯಾಧರ ವೇದವರ್ಮ ಟಿ. ರವರು ಸಂವಿಧಾನದ ಪೀಠಿಕೆ ಬೋಧಿಸುವ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಜಿ.ಎಸ್. ಯತೀಶ್ ವಹಿಸಿದ್ದರು.



## ಇ-ಟೆಂಡರ್ ರೈತರಿಗೆ ವರದಾನ

ದಾವಣಗೆರೆ, ನ.26- ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಕ್ಕೆ ಬರುವ ಕೃಷಿ ಹುಟ್ಟುವಳಿಗಳಾದ ಮೆಕ್ಕೆಜೋಳ, ರಾಗಿ, ಹತ್ತಿ, ತೊಗರಿ, ಅಡಿಕೆ, ಸೂರ್ಯಕಾಂತಿ, ಶೇಂಗಾ ಉತ್ಪನ್ನಗಳಿಗೆ ಈಗಾಗಲೇ ಇ-ಟೆಂಡರ್ ವ್ಯವಸ್ಥೆ ಜಾರಿ ಮಾಡಲಾಗಿದೆ.

ನವೆಂಬರ್ 25 ರಿಂದ ಭತ್ತದ ಉತ್ಪನ್ನವನ್ನೂ ಸಹ ಇ-ಟೆಂಡರ್ ವ್ಯವಸ್ಥೆಯಲ್ಲಿ ಜಾರಿಗೊಳಿಸಿದ್ದು, ಇದರಿಂದ ರೈತರ ಬೆಳೆಗಳಿಗೆ ಸ್ಪರ್ಧಾತ್ಮಕ ಬೆಲೆಯು ಸಿಗುತ್ತಿರುವುದರಿಂದ ಜಿಲ್ಲೆಯ ರೈತರು ತಾವು ಬೆಳೆದ ಭತ್ತದ ಉತ್ಪನ್ನವನ್ನು ಒಣಗಿಸಿ, ಸ್ವಚ್ಛಗೊಳಿಸಿ ಎಪಿಎಂಸಿ ಪ್ರಾಂಗಣಕ್ಕೆ ತಂದು ಇ-ಟೆಂಡರ್ ಮೂಲಕ ಮಾರಾಟ ಮಾಡಿ ಸ್ಪರ್ಧಾತ್ಮಕ ಬೆಲೆಯನ್ನು ಪಡೆದುಕೊಳ್ಳಲು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ತಿಳಿಸಿದ್ದಾರೆ.

## ಹರಪನಹಳ್ಳಿ : ಇಂದು ಸಂಸ್ಕೃತಿ ಉತ್ಸವ

ಅಂಬ್ಲಿ ದೊಡ್ಡಭರಮಪ್ಪ ಪ್ರಥಮ ದರ್ಜೆ ಕಾಲೇಜಿ ನಲ್ಲಿ ಸೇಡಂ ಶ್ರೀ ಕೊತ್ತಲ ಬಸವೇಶ್ವರ ಶಿಕ್ಷಣ ಸಮಿತಿಯಿಂದ 7ನೇ ಭಾರತೀಯ ಸಂಸ್ಕೃತಿ ಉತ್ಸವವು ಇಂದು ಬೆಳಿಗ್ಗೆ 11ಕ್ಕೆ ನಡೆಯಲಿದೆ. ವೀರಶೈವ ವಿದ್ಯಾವರ್ಧಕ ಸಂಘದ ಸಹಯೋಗದಲ್ಲಿ ಆರಂಭವಾಗುವ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿ ಮಹೇಶ್ ಮಾಶಾಳ್ ಉಪನ್ಯಾಸ ನೀಡುವರು.

## ನಗರದಲ್ಲಿ ಇಂದು ಪೊಲೀಸ್ ಕ್ರೀಡಾಕೂಟ

ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟವು ಇಂದಿನಿಂದ ಮೂರು ದಿನ ಪೊಲೀಸ್ ಕವಾಯತು ಮೈದಾನದಲ್ಲಿ ನಡೆಯಲಿದೆ. ಜಿಲ್ಲಾಧಿಕಾರಿ ಜಿ.ಎಂ ಗಂಗಾಧರಸ್ವಾಮಿ ಕ್ರೀಡಾಕೂಟ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಐಜಿಪಿ ಬಿ.ರಮೇಶ್ ಆಗಮಿಸುವರು.


### ಇನ್ಶೂರೆನ್ಸ್

ಆರೋಗ್ಯ, ವಾಹನ, ಲೈಫ್ ಮತ್ತು ಎಲ್ಲಾ ರೀತಿಯ ಇನ್ಶೂರೆನ್ಸ್ ಮಾಡಲಾಗುತ್ತದೆ.
ಮತ್ತು ಒಂದು ಇನ್ಶೂರೆನ್ಸ್ ಕಂಪೆನಿಯಿಂದ ಮತ್ತೊಂದು ಕಂಪೆನಿಗೆ ಪೋರ್ಟ್ ಮಾಡಿಕೊಡಲಾಗುತ್ತದೆ.

85500 04000


## ನಗರದಲ್ಲಿ ಇಂದು ಪ್ರವಚನ



ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಶ್ರೀ ಸಂಜೀವಿನಿ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಇಂದಿನಿಂದ ಇದೇ ದಿನಾಂಕ 30 ವರೆಗೆ ಪ್ರತಿ ದಿನ ಸಂಜೆ 7 ಗಂಟೆಗೆ ಮುಂಡ ಗೋಡಿನ ಅತ್ತಿವೇರಿ ಶ್ರೀ ಬಸವೇಶ್ವರಿ ಮಾತಾಜಿ ಅವರಿಂದ ಪ್ರವಚನ ಏರ್ಪಡಿಸಲಾಗಿದೆ.


### ಅಭಿನಂದನೆಗಳು



ಆಂಗ್ಲಭಾಷಾ ಉಪನ್ಯಾಸಕರಾಗಿ ಸುಮಾರು 35 ವರ್ಷಗಳ ಕಾಲ ಸೇವೆ ಸಲ್ಲಿಸಿ ಜೊತೆಗೆ ಸಮಾಜ ಸೇವೆಯಲ್ಲಿ ತೊಡಗಿರುವ

**ಪ್ರೊ. ದ್ಯಾಮಪ್ಪ**

ಇವರನ್ನು ಕರ್ನಾಟಕ ಸರ್ಕಾರದಿಂದ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಸಿಂಡಿಕೇಟ್ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುತ್ತಾರೆ.
ಇವರಿಗೆ ನಮ್ಮ ಹೃದಯಪೂರ್ವಕ ಅಭಿನಂದನೆಗಳು....

ಶ್ರೀ ಮಂಜುನಾಥ ಸ್ವಾಮಿ ವಿದ್ಯಾಸಂಸ್ಥೆ (ರಿ.) ದಾವಣಗೆರೆ.
ಅಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರುಗಳು ಆಡಳಿತಾಧಿಕಾರಿಗಳು, ಪ್ರಾಂಶುಪಾಲರು ಹಾಗೂ ಬೋಧಕ ಮತ್ತು ಬೋಧಕೇತರ ವರ್ಗ

ಶ್ರೀ ಮಂಜುನಾಥಸ್ವಾಮಿ ಪದವಿಪೂರ್ವ ಕಾಲೇಜ್
ಸರಸ್ವತಿ ನಗರ, ದಾವಣಗೆರೆ.



### ಎನ್ ಅಬ್ದುಲ್ ಲತೀಫ್ ಸಾಬ್ ನಿಧನ



ದಾವಣಗೆರೆಯ ಹಾಸಬಾವಿ ಸರ್ಕಲ್ ಬಳಿಯ ನಿವಾಸಿ, ಕಾಂಗ್ರೆಸ್ ಪಕ್ಷದ ಹಿರಿಯ ಧುರೀಣರು, ಮುಸ್ಲಿಂ ಸಮಾಜದ ಹಿರಿಯ ಮುಖಂಡರು, ಖ್ಯಾತ ಅಕ್ಕಿ ವರ್ತಕರಾದ

**ಶ್ರೀ ಎನ್. ಅಬ್ದುಲ್ ಲತೀಫ್ ಸಾಬ್**

ಇವರು ದಿನಾಂಕ : 26.11.2024ರ ಮಂಗಳವಾರ ಬೆಳಿಗ್ಗೆ 7.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ 76 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ದಫನ್ ಕಾರ್ಯವು ದಿನಾಂಕ : 26.11.2024ರ ಮಂಗಳವಾರದಂದೇ ರಾತ್ರಿ 8.30ಕ್ಕೆ ನಗರದ ಪಿ.ಬಿ.ರಸ್ತೆಯಲ್ಲಿರುವ ಹಳೇ ಖಬರಸ್ಥಾನದಲ್ಲಿ ನೆರವೇರಿಸಲಾಯಿತು.

ದು:ಖತಪ್ತ ಕುಟುಂಬವರ್ಗ



॥ ಶ್ರೀ ಮೈಲಾರ ಲಿಂಗೇಶ್ವರ ಪ್ರಸನ್ನ ॥ ॥ ಶ್ರೀ ಉಚ್ಚಂಗಮ್ಮ ದೇವಿ ಪ್ರಸನ್ನ ॥ ॥ ಶ್ರೀ ದೇವರಹಟ್ಟಿ ಬಸವೇಶ್ವರ ಪ್ರಸನ್ನ ॥

### ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಜನನ : 15.10.1954, ನಿಧನ : 24.11.2024

ದಾವಣಗೆರೆ ತಾ. ಬಿ. ಚಿತ್ತಾನಹಳ್ಳಿ ಗ್ರಾಮದ ವಾಸಿ ಶ್ರೀಮತಿ ಕಾಳಮ್ಮ ಮತ್ತು ಮಕ್ಕಳು, ಸಹೋದರರು ಮಾಡುವ ವಿಜ್ಞಾಪನೆಗಳು.
ದಿನಾಂಕ 24.11.2024ರನೇ ಭಾನುವಾರ ಬೆಳಿಗ್ಗೆ 10.05ಕ್ಕೆ ನಮ್ಮ ಪೂಜ್ಯ ಪತಿಯವರಾದ

**ಶ್ರೀ ಗಂಗಾಧರಪ್ಪ ಗೌಳಿ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಸಮಾರಾಧನೆ'ಯನ್ನು ದಿನಾಂಕ : 28.11.2024ನೇ ಗುರುವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ದಾವಣಗೆರೆ ತಾ. ಬಿ. ಚಿತ್ತಾನಹಳ್ಳಿಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಶ್ರೀಮತಿ ಕಾಳಮ್ಮ ಮತ್ತು ಮಕ್ಕಳು ಹಾಗೂ ಸಹೋದರರು ಹಾಗೂ ಬಂಧು ಮಿತ್ರರು. ಮೊ : 96063 03229

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ತಲುಪದೇ ಇರುವವರು ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.



### ಜನ್ಮದಿನದ ಶುಭಾಶಯಗಳು



ದಿನಾಂಕ 27.11.2024ರ ಬುಧವಾರದಂದು ತಮ್ಮ 43ನೇ ವರ್ಷದ ಜನ್ಮದಿನದ ಸಂಭ್ರಮದಲ್ಲಿರುವ
ಹಿಂದೂ ಮಹಾಗಣಪತಿ ಟ್ರಸ್ಟಿಗಳೂ,
ವೀರಶೈವ-ಲಿಂಗಾಯತ ಸಮಾಜದ ಮುಖಂಡರೂ,
ಚೌಕಿಪೇಟೆ ಅಕ್ಕಿ ವರ್ತಕರ ಸಂಘದ ಅಧ್ಯಕ್ಷರೂ,
ಖ್ಯಾತ ವರ್ತಕರೂ, ಹರ್ಷ ಕಮರ್ಷಿಯಲ್ಸ್ ಮತ್ತು ಜೆ.ಪಿ. ಎಂಟರ್‌ಪ್ರೈಸಸ್,
ರೈಸ್ ಕಾರ್ನರ್ ಮಾಲೀಕರಾದ

**ಶ್ರೀ ಎಂ.ವಿ. ಜಯಪ್ರಕಾಶ್ ಮಾಗಿ**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ಶ್ರೀಯುತರಿಗೆ ಆಯುರಾರೋಗ್ಯ, ಐಶ್ವರ್ಯವನ್ನು ದೇವರು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಶುಭ ಕೋರುವವರು :

- ದೇವರಮನೆ ಶಿವಕುಮಾರ್, ದೂಡಾ ಮಾಜಿ ಅಧ್ಯಕ್ಷರು
- ಕೈಲಾಸಬಾಬು ಮಾಗಿ
- ಜಗದೀಶ್ ಬ್ಯಾಡಗಿ ಧರ್ಮಸ್ಥಳ ಅಂಡ್ ಕೋ
- ಪಂಚಾಕ್ಷರಿ ಆರ್.ಎಂ.
- ಸಿದ್ದೇಶ್ ವೇದಮೂರ್ತಿ (ವಿನಾಯಕ ರೈಸ್ ಮಿಲ್)
- ಜೊಳ್ಳಿ ಗುರು ಹಿಂದೂ ಮಹಾಗಣಪತಿ ಸಂಸ್ಥಾಪಕರು, ಅಧ್ಯಕ್ಷರು
- ಎಬಿಸಿ ಸುಮಿತ್
- ಜರೀಕಟ್ಟೆ ಚಂದ್ರು
- ಮಂಜುನಾಥ್ ಆದಿತ್ಯ ಅಲ್ಯುಮಿನಿಯಂ
- ಲಿಂಗೇಶ್ ಹಿರೇಗೌಡ್ರು
- ಮಂಜುನಾಥ (ಬಿ.ಪಿ.ಎಂ.)
- ವಿನಯ್ (ಬಿ.ಪಿ.ಎಂ.)
- ಸಿದ್ದು ಮಾಳಗಿ (ಎಂ.ಪಿ.)
- ಹಲುವಾಗಲು ರುದ್ರಣ್ಣ
- ಹಲುವಾಗಲು ಶಿವಣ್ಣ
- ಜಿ.ಬಿ. ಉಮೇಶ್
- ಸತೀಶ್ ಹತ್ತಿ ಮತ್ತೂರು (ಹಾವೇರಿ)
- ಗಿರೀಶ್ (ಕಮಲ್ ಎಂಟರ್‌ಪ್ರೈಸಸ್)
- ವಿನಯ್ ಕರಮುಡಿ
- ಪರಶುರಾಮ್ ಪಿ.ಎಸ್. ರೈಸ್ ಬ್ರೋಕರ್
- ವಿಶ್ವನಾಥ್ ಬಾದಾಮಿ
- ಜಯರಾಜ್ ಮೇಟಿ
- ಮಲ್ಲಿಕಾರ್ಜುನ ಟಿ.ಎಸ್.
- ಕುಮಾರಸ್ವಾಮಿ ತೊಗಲೇರಿ
- ಸತೀಶ್ ಹುಬ್ಬಳ್ಳಿ
- ಎ.ಬಿ. ಬಸವಲಿಂಗ
- ಪ್ರಸನ್ನ ಪೇಟೆ
- ಅಣ್ಣಪ್ಪಸ್ವಾಮಿ ಎಸ್.ಜಿ.
- ಬಸವರಾಜ ಶಾಸ್ತ್ರಿ
- ಮಂಜು ಕರೇಶಿವಪ್ಪರ
- ಸ್ಮಿತ್ (ರಾಧಾ ಟ್ರೇಡರ್)
- ಗಣೇಶ ಆರ್.ಎಂ.
- ಷಣ್ಮುಖ ಮಾಳಗಿ
- ವಿಷ್ಣು ಟ್ರೇಡಿಂಗ್ ಕಂಪನಿ
- ಹೊನ್ನಳ್ಳಿ ಪ್ರಭು, (ಹೆಚ್.ಪಿ. ಟ್ರೇಡರ್ಸ್)
- ಹಿದಾಯಿತ್ ಸ್ಟೋರ್ಸ್ (ಹರಿಹರ)
- ಎಂ.ಜಿ.ಎಂ. ಮಹೇಶ್
- ಕೆ.ಎಂ.ಹೆಚ್. ಗುರು
- ಆನಂದ್ ಎಂ.ವೈ.
- ಡಿ.ಎಂ. ಸುರೇಶ್‌ಬಾಬು
- ಎಂ.ಕೆ. ನಿಖಿಲ್ ಮಾಗಿ
- ಬಸವರಾಜ್ ಕಂಚಿಕೇರಿ
- ಶಂಭಣ್ಣ, ದಾವಣಗೆರೆ
- ಶಂಭಣ್ಣ, ಹರಿಹರ
- ಟಿಂಕರ್ ಮಂಜಣ್ಣ
- ಶಿವನಗೌಡ ಪಾಟೀಲ್
- ಟಿ.ಹೆಚ್.ಎಂ. ವೀರೇಶ್
- ಪ್ರಕಾಶ ಮೇಟಿ
- ವೀರಹನುಮಾನ್ ಆಗ್ರೋ ರೈಸ್ ಟೆಕ್
- ಹರ್ಷ ಮಾಗಿ
- ಕಿಶೋರ್ ಮಾಗಿ
- ಕೆ.ಎಸ್. ರುದ್ರೇಶ್
- ಪ್ರಜ್ವಲ್
- ಅಶೋಕ್ ಕೋಳೂರ ಇಂಜಿನಿಯರ್
- ಬಿಜಾಪುರ ಶರಣಪ್ಪ
- ಬಿಜಾಪುರ ಸಿದ್ದೇಶ್
- ಎನ್‌ಎಂಕೆ ರೈಸ್‌ಮಿಲ್
- ಶರಣ ಗೌಡ ಬಿರಾದಾರ್

ಎಂ.ವಿ. ಜಯಪ್ರಕಾಶ್ ಮಾಗಿ ಸ್ನೇಹ ಬಳಗ



### ಹುಟ್ಟುಹಬ್ಬದ ಶುಭಾಶಯಗಳು

ದಿನಾಂಕ 27-11-2024ರಂದು ತಮ್ಮ ಜನ್ಮ ದಿನದ ಸಂಭ್ರಮದಲ್ಲಿರುವ

**ಶ್ರೀಮತಿ ಜಿ.ಆರ್. ಹರ್ಷಿಣಿ ಚೇತನ್‌ಕೃಷ್ಣ**

IRS, Deputy Commissioner of Income Tax, Bangalore

ಇವರಿಗೆ ಹುಟ್ಟುಹಬ್ಬದ ಶುಭಾಶಯಗಳು.



ಇವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರುವವರು

- ಶ್ರೀ ಚೇತನ್‌ಕೃಷ್ಣ, IRS, Deputy Director, Directorate of Enforcement (ED), New Delhi.
- ಪುತ್ರ : ಚಿ. ಧ್ರುವ ಕೃಷ್ಣ
- ಪುತ್ರಿ : ಕು. ರೇವತಿ ಕೃಷ್ಣ
- ಶ್ರೀಮತಿ ಎಸ್. ಸುನಂದಾದೇವಿಯವರು
- ಶ್ರೀ ಹೆಚ್.ವಿ. ಗೋಪಾಲಪ್ಪನವರು, ಕಾರ್ಯದರ್ಶಿಗಳು, ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ (ರಿ.) ದಾವಣಗೆರೆ.
- ಶ್ರೀ ಚಾಣುಕ್ಯ ಹೆಚ್.ಜಿ.
- ಶ್ರೀಯುತ ರಾಜ್‌ಗೋಪಾಲ್‌ರವರು
- ಶ್ರೀಮತಿ ಸುನಂದಮ್ಮನವರು
- ಶ್ರೀ ಜಿ.ಆರ್. ರಕ್ಷಿತ್
- ಶ್ರೀಮತಿ ಮಂಜುಳ ಬಸಪ್ಪನವರು ಹಾಗೂ

ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ (ರಿ.) ದಾವಣಗೆರೆ.
ಸಂಸ್ಥೆಯ ಸಿಬ್ಬಂದಿ ವರ್ಗ ಮತ್ತು ಬಂಧು-ಮಿತ್ರರು.


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas